ಸಂಪುಟ 01 । ಸಂಚಿಕೆ 187 ಸೋಮವಾರ 09 ನವೆಂಬರ್ 2026 । ಪುಟ 4 । ಬೆಲೆ–2 ರೂ.

Posting registration number : RCR/RNP/116/2026-2028

ಇರ್ಫಾನ್ ಕೆ
ಸಂಪಾದಕರು

MA ವಹಾಬ್
ಪ್ರಧಾನ ಸಂಪಾದಕರು

ನೈಜ್ಯ ದೆಸೆ
NAIJYA DESE

ಸತ್ಯದ ದಿಕ್ಕು TRUE PATH

ಸಿಂಧನೂರು, ಮಸ್ಕಿ
ಮಾನ್ವಿ, ಅಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

ಕನ್ನಡ ದಿನ ಪತ್ರಿಕೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

ದೀಪಾವಳಿ ಹಬ್ಬದ
ಹಾರ್ದಿಕ ಶುಭಾಶಯಗಳು

M. M. Education Trust (R.), Balaganur

ಸನ್‌ರೈಸ್ ಕಾನೂನು ಮಹಾವಿದ್ಯಾಲಯ
SUNRISE LAW COLLEGE
ಸಿಂಧನೂರು | SINDHANUR





ಪ್ರವೇಶಾತಿ ಪ್ರಾರಂಭವಾಗಿವೆ
ADMISSION OPEN

LLB (3 ವರ್ಷಗಳ ಪದವಿ ಕೋರ್ಸ್)
3 YEARS DEGREE COURSE

ಅರ್ಹತೆ: ಯಾವುದೇ ವಿಷಯದಲ್ಲಿ ಪದವಿ ಪಡೆದವರು (Degree)

ಎಲ್.ಎಲ್.ಬಿ. ಪದವಿಯ ನಂತರದ ವೃತ್ತಿ ಅವಕಾಶಗಳು
- ನ್ಯಾಯಾಂಗ ಸೇವೆಗಳು (ನ್ಯಾಯಾಧೀಕರು)
- ಸರ್ಕಾರಿ ಅಭಿಯೋಜಕರು (Public Prosecutor)
- ವಕೀಲರು (Advocate)
- ಆದಾಯ ತೆರಿಗೆ ವಕೀಲರು (Income Tax Advocate)
- ಕಾರ್ಪೊರೇಟ್ ಕಾನೂನು ಸಲಹೆಗಾರರು
- ಬ್ಯಾಂಕ್‌ಗಳು ಹಾಗೂ ಸರ್ಕಾರಿ ಕಚೇರಿಗಳ ಕಾನೂನು ಸಲಹೆಗಾರರು
- ಕಾನೂನು ಕಾಲೇಜುಗಳಲ್ಲಿ ಪ್ರಾಧ್ಯಾಪಕರು / ಉಪನ್ಯಾಸಕರು



ಸಂಪರ್ಕಿಸಿ
ಇರ್ಫಾನ್ ಕೆ.
ಅಧ್ಯಕ್ಷರು
ಮೊಬೈಲ್: 8197143588, 9036731385

ವಿಳಾಸ: ವಾಸವಿ ಕಲ್ಯಾಣ ಮಂಟಪದ ಹತ್ತಿರ, ಸಿಂಧನೂರು.

ನಾಡಿನ ಅಸ್ಮಿತೆ ಕಾಪಾಡುವಲ್ಲಿ ಮತ್ತು ಪ್ರತಿಭೆಗಳನ್ನು ಪ್ರೋತ್ಸಾಹಿಸುವಲ್ಲಿ ಕನ್ನಡ ಹಿತರಕ್ಷಕ ಸಂಘದ ಸೇವೆ ಅನನ್ಯ : ಶಾಸಕ ಜೆ.ಎನ್. ಗಣೇಶ್

ನೈಜ್ಯ ದೆಸೆ ನ್ಯೂಸ್




ಕಂಪ್ಲಿ: "ಕನ್ನಡ ಎನ್ನುವುದು ಕೇವಲ ಭಾಷೆಯಲ್ಲ, ಅದು ನಮ್ಮ ಸಂಸ್ಕೃತಿ ಮತ್ತು ಬದುಕು. ನಮ್ಮ ತಾಯಿನುಡಿಯ ಅಸ್ಮಿತೆಯನ್ನು ಉಳಿಸಿ ಬೆಳೆಸುವಲ್ಲಿ ಹಾಗೂ ಸ್ಥಳೀಯ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸುವಲ್ಲಿ ಬಳ್ಳಾರಿ ಜಿಲ್ಲೆ ಕನ್ನಡ ಹಿತರಕ್ಷಕ ಸಂಘವು ಶ್ಲಾಘನೀಯ ಕೆಲಸ ಮಾಡುತ್ತಿದೆ. ಈ ಬಾರಿಯ 71ನೇ ಕರ್ನಾಟಕ ರಾಜ್ಯೋತ್ಸವ ಹಾಗೂ ಸಂಘದ 56ನೇ ವಾರ್ಷಿಕೋತ್ಸವದ ಸವಿನೆನಪಿನಲ್ಲಿ ತಾಲೂಕಿನ ನೂರಾರು ಪ್ರತಿಭಾವಂತ ವಿದ್ಯಾರ್ಥಿಗಳನ್ನು ಮತ್ತು ವಿವಿಧ ರಂಗಗಳ ಸಾಧಕರನ್ನು ಒಂದೇ ವೇದಿಕೆಯಲ್ಲಿ ಸನ್ಮಾನಿಸಿರುವುದು ಇಡೀ ಕಂಪ್ಲಿ ಕ್ಷೇತ್ರಕ್ಕೆ ಹೆಮ್ಮೆಯ ವಿಷಯವಾಗಿದೆ," ಎಂದು ಕಂಪ್ಲಿ ವ ಕ್ಷೇತ್ರದ ಶಾಸಕರಾದ ಜೆ.ಎನ್. ಗಣೇಶ್ ಹೇಳಿದರು.ಸಣಾಪುರ ರಸ್ತೆಯ ವೀರಶೈವ ಸಂಘದ ಆವರಣದಲ್ಲಿ ಶನಿವಾರ ಜರುಗಿದ ಕರ್ನಾಟಕ ರಾಜ್ಯೋತ್ಸವದಲ್ಲಿ ಪಾಲ್ಗೊಂಡು ಮಾತನಾಡಿದರು. ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಕನ್ನಡ ಹಾಗೂ ಆಂಗ್ಲ ಭಾಷೆಯ ವಿಷಯದಲ್ಲಿ ಅತ್ಯುನ್ನತ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು.ವಿವಿಧ ರಂಗಗಳ ಸಾಧಕರಾದ ನೃತ್ಯ ಸಂಯೋಜಕ ಎಂ.ಎಸ್.ಮುನ್ನ, ಕುಸ್ತಿ ಪಟು ಇದಂಗಿ ಹುಲುಗಪ್ಪ, ಚಲನಚಿತ್ರ ನಿರ್ಮಾಪಕ ಶಂಕರ ಮೆಟ್ರಿ, ಕರ್ನಾಟಕ ಜಾನಪದ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಎನ್. ಹುಸೇನ್ ಭಾಷ (ತಾಷಾರಾಂಡೋಲ್), ಸಾವಯವ ಕೃಷಿಕ ಎಂ.ಎಂ.ಬಸವರಾಜ, ರೈಫಲ್ ಶೂಟಿಂಗ್ ತರಬೇತುದಾರ ಸಿ.ಚಿನ್ನರಾಜು, ಅಂತರಾಷ್ಟ್ರೀಯ ವಿಕಲಚೇತನ ಕ್ರೀಡಾಪಟು ರವಿಶಂಕರ್, ಯೋಗ ಉಪನ್ಯಾಸಕ ಡಿ.ಮಹೇಶ್ ಬಾಬು, ಯೋಗ ತರಬೇತುದಾರರಾದ ಡಿ.ಮೌನೇಶ್, ನಾಗಪ್ಪ ಕಂಬಳಿ ಹಾಗೂ ಸಾಮಾಜಿಕ ಸಾಧಕ ಕಾಲಿಂಗವರ್ಧನ ಹಾದಿಮನಿ ರವರಿಗೆ ಸನ್ಮಾನಿಸಿ ಗೌರವಿಸಲಾಯಿತುಈ ಸಂದರ್ಭದಲ್ಲಿ ತಾಲೂಕು ವೀರಶೈವ ಸಂಘದ ಅಧ್ಯಕ್ಷ ಎಸ್.ಎಂ.ನಾಗರಾಜ ಸ್ವಾಮಿ, ಇತಿಹಾಸ ಸಂಶೋಧಕ ಹಾಗೂ ಉಪನ್ಯಾಸಕ ಶರಣಬಸಪ್ಪ ಕೋಲ್ಕಾರ್, ಪುರಸಭೆಯ ಪ್ರಭಾರಿ ಮುಖ್ಯಾಧಿಕಾರಿ ಬಿ. ಮಲ್ಲಿಕಾರ್ಜುನ ಮತ್ತು ಕನ್ನಡ ಹಿತರಕ್ಷಕ ಸಂಘದ ಅಧ್ಯಕ್ಷ ಬೂದುಗುಂಪಿ ಅಂಬಣ್ಣ, ಕಾರ್ಯದರ್ಶಿ ಸಿ.ಯಂಕಪ್ಪ, ಗೌರವ ಅಧ್ಯಕ್ಷ ಕ.ಮ.ಹೇಮಯ್ಯ ಸ್ವಾಮಿ, ಖಜಾಂಚಿ ಮಾ. ಶ್ರೀನಿವಾಸ ಹಾಗೂ ಪದಾಧಿಕಾರಿಗಳಾದ ಕೆ. ಮೆಹಬೂಬ್, ಬಂಗಿ ದೊಡ್ಡ ಮಂಜುನಾಥ, ಅಂಬಿಗರ ಮಂಜುನಾಥ, ಶಾಮ್ ಸುಂದರ್, ಇಂದ್ರಜಿತ್ ಸಿಂಗ್ ಮತ್ತು ಅಯೋಧ್ಯೆ ವೆಂಕಟೇಶ ಇದ್ದರು.ಪಟ್ಟಣದ ವಿವಿಧ ಶಾಲೆಗಳ ವಿದ್ಯಾರ್ಥಿಗಳು ನಡೆಸಿಕೊಟ್ಟ ಸಾಂಸ್ಕೃತಿಕ ಕಾರ್ಯಕ್ರಮಗಳು ನಾಡಿನ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಪ್ರತಿಬಿಂಬಿಸಿದವು.ವರದಿ: ಜಿಲಾನಸಾಬ್ ಬಡಿಗೇರ್

ಸಂಕೇಶ್ವರಾಳ ಬಸ್ ನಿಲ್ದಾಣ ತೆರವಿಗೆ ಜಿ.ಪಂ. ಅಧಿಕಾರಿಗಳ ಕ್ರಮ

ಎಐಎಂಐಎಂ ಪಕ್ಷದ ಮನವಿ ಹಾಗೂ 'ನೈಜ ದೆಸೆ' ಪತ್ರಿಕಾ ವರದಿಗೆ ಸ್ಪಂದನೆ; ಹಳೆಯ ತಂಗುದಾಣ ತೆರವುಗೊಳಿಸಿ ಹೊಸ ಬಸ್ ನಿಲ್ದಾಣ ನಿರ್ಮಾಣಕ್ಕೆ ಕ್ರಿಯಾಯೋಜನೆಯಲ್ಲಿ ಸೇರ್ಪಡೆ

❑ ನೈಜ್ಯ ದೆಸೆ ನ್ಯೂಸ್

ರಾಯಚೂರು, ಎಐಎಂಐಎಂ ಪಕ್ಷದ ರಾಯಚೂರು ಘಟಕವು 19-08-2026ರಂದು ಜಿಲ್ಲಾ ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸಲ್ಲಿಸಿದ್ದ ಮನವಿಗೆ ಸ್ಪಂದಿಸಿರುವ ಅಧಿಕಾರಿಗಳು ಸಂಕೇಶ್ವರಾಳ ಬಸ್ ನಿಲ್ದಾಣವನ್ನು ಭೌತಿಕವಾಗಿ ಪರಿಶೀಲಿಸಿದ್ದಾರೆ.ಪರಿಶೀಲನೆಯ ಸಂದರ್ಭದಲ್ಲಿ ಸದರಿ ಬಸ್ ನಿಲ್ದಾಣವು ಶಿಥಿಲಾವಸ್ಥೆಯಲ್ಲಿದ್ದು, ಸಾರ್ವಜನಿಕರು ಬಳಸಲು ಯೋಗ್ಯವಾಗಿಲ್ಲ ಎಂಬುದು ಕಂಡುಬಂದಿದೆ. ಸಾರ್ವಜನಿಕರ ಸಂಚಾರ ಮತ್ತು ಹಿತದೃಷ್ಟಿಯಿಂದ ಹಳೆಯ ಬಸ್ ನಿಲ್ದಾಣವನ್ನು ತೆರವುಗೊಳಿಸುವಂತೆ ಲೋಕೋಪಯೋಗಿ ಇಲಾಖೆಯ ದೇವದುರ್ಗ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು 24-09-2026ರಂದು ಜಿಲ್ಲಾ ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ವರದಿ ಸಲ್ಲಿಸಿದ್ದರು.ಆದರೆ, ವರದಿ ಸಲ್ಲಿಕೆಯಾಗಿ ಹಲವು ದಿನಗಳು ಕಳೆದರೂ ತೆರವು ಕಾರ್ಯ ಕೈಗೊಳ್ಳದ ಹಿನ್ನೆಲೆಯಲ್ಲಿ ಎಐಎಂಐಎಂ ಪಕ್ಷದ



ಮುಖಂಡರು ಜಿಲ್ಲಾ ಪಂಚಾಯಿತಿ ಹಾಗೂ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಮತ್ತೊಮ್ಮೆ



ಮೌಖಿಕವಾಗಿ ಚರ್ಚಿಸಿ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ.ಈ ಕುರಿತು ಸಂಬಂಧಪಟ್ಟ ಅಧಿಕಾರಿಗಳು ದೂರವಾಣಿ ಮೂಲಕ ಮಾಹಿತಿ ನೀಡಿದ್ದು, ಸಂಕೇಶ್ವರಾಳ ಬಸ್ ತಂಗುದಾಣವನ್ನು 2026-27ನೇ ಸಾಲಿನ ತಾಲೂಕು ಪಂಚಾಯಿತಿ ಅನಿರ್ಬಂಧಿತ ಅನುದಾನದ ಕ್ರಿಯಾಯೋಜನೆಯಲ್ಲಿ ಸೇರ್ಪಡೆಗೊಳಿಸಲಾಗಿದೆ. ಹಳೆಯ ತಂಗುದಾಣವನ್ನು ತೆರವುಗೊಳಿಸಿ ಹೊಸ ಬಸ್ ತಂಗುದಾಣ ನಿರ್ಮಿಸಲು ಯೋಜನೆ ರೂಪಿಸಲಾಗಿದೆ ಎಂದು ತಿಳಿಸಿದ್ದಾರೆ.ಈ ಹಿಂದೆ ಅಕ್ಟೋಬರ್ 10ರಂದು 'ನೈಜ ದೆಸೆ ಕನ್ನಡ ದಿನಪತ್ರಿಕೆ'ಯಲ್ಲಿ ಸಂಕೇಶ್ವರಾಳ ಬಸ್ ನಿಲ್ದಾಣದ ಸಮಸ್ಯೆ ಕುರಿತು ವರದಿ ಪ್ರಕಟಿಸಲಾಗಿತ್ತು. ಇದೀಗ ಪತ್ರಿಕಾ ವರದಿ ಹಾಗೂ ಎಐಎಂಐಎಂ ಪಕ್ಷದ ಮನವಿಯ ಹಿನ್ನೆಲೆಯಲ್ಲಿ ಅಧಿಕಾರಿಗಳು ಮುಂದಿನ ಕ್ರಮಕ್ಕೆ ಮುಂದಾಗಿರುವುದು ಸಾರ್ವಜನಿಕರ ಗಮನ ಸೆಳೆದಿದೆ.ಈ ಸಂದರ್ಭದಲ್ಲಿ ಎಐಎಂಐಎಂ ರಾಯಚೂರು ನಗರ ಅಧ್ಯಕ್ಷ ಶಬ್ಬೀರ್ ಅಹ್ಮದ್ ಹೌದಡಿ, ನಗರ ಜಂಟಿ ಕಾರ್ಯದರ್ಶಿ ತನ್ವೀರ್ ಅಹ್ಮದ್ ಖಾನ್, ವಾರ್ಡ್ ನಂ. 29ರ ಅಧ್ಯಕ್ಷ ಮೊಹಮ್ಮದ್ ಅಲಿಮ್ ಹಾಗೂ ವಾರ್ಡ್ ನಂ. 14ರ ಅಧ್ಯಕ್ಷ ಸೊಹೈಲ್ ಖುರೇಷಿ ಉಪಸ್ಥಿತರಿದ್ದರು.

ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ

ಅರಕೇರಾ ತಾಲೂಕಿನ ಮದರ್ ಕಲ್ ಗ್ರಾಮದ ಅಂಬಾ ಮಠದ ಬಗ್ಗೆ ಹೊರಗಿನವರು ತಪ್ಪು ಮಾಹಿತಿ ಹರಡಬಾರದು: ಚಿನ್ನಪ್ಪ ದೊಡ್ಡಮನಿ

❑ ನೈಜ್ಯ ದೆಸೆ ನ್ಯೂಸ್

ಮದರ್‌ಕಲ್, ಮದರ್‌ಕಲ್ ಹಾಗೂ ಸುತ್ತಮುತ್ತಲಿನ ಗ್ರಾಮಗಳ ದೈವದ ಭಕ್ತರ ಒಗ್ಗಟ್ಟಿನಿಂದ ಅಂಬಾ ಮಠದಲ್ಲಿ ಅಂಬಾ ದೇವಿಯ ಪ್ರತಿಷ್ಠಾಪನೆ ಸೇರಿದಂತೆ ವಿವಿಧ ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಮಠದ ಕುರಿತು ಸಂಪೂರ್ಣ ಮಾಹಿತಿ ತಿಳಿದುಕೊಳ್ಳದೆ ಹೊರಗಿನ ಕೆಲವು ಸಂಘ-ಸಂಸ್ಥೆಗಳು ಹಾಗೂ ವ್ಯಕ್ತಿಗಳು ಆರೋಪ ಮಾಡುತ್ತಿರುವುದು ಸರಿಯಲ್ಲ ಎಂದು ಮದರ್‌ಕಲ್ ಗ್ರಾಮದ ಹಿರಿಯ ಮುಖಂಡ ಚಿನ್ನಪ್ಪ ದೊಡ್ಡಮನಿ ಹೇಳಿದರು.ನ. 7ರಂದು ಅಂಬಾ ಮಠದಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು, ಗ್ರಾಮದ ದೈವದ ಭಕ್ತರೆಲ್ಲರೂ ಒಗ್ಗೂಡಿ ಅಂಬಾ ದೇವಿಯ ಪ್ರತಿಷ್ಠಾಪನೆ ಮಾಡಿದ್ದಾರೆ. ಭಕ್ತರು ನೀಡಿದ ದೇಣಿಗೆ ಹಾಗೂ ಸಹಕಾರದಿಂದ ಹೊಸ ತೇರು ನಿರ್ಮಿಸಲಾಗಿದ್ದು, ಮಹಿಳೆಯರು ರಥ-ೋತ್ಸವ ಎಳೆಯುವ ಧಾರ್ಮಿಕ ಕಾರ್ಯಕ್ರಮವೂ ನಡೆಯುತ್ತಿದೆ. ಸಾಮೂಹಿಕ ವಿವಾಹ, ಮಹಿಳೆಯರಿಗೆ ಉಡಿತುಂಬುವ ಕಾರ್ಯಕ್ರಮ, ಪ್ರತಿ ಹುಣ್ಣಿಮೆಯಂದು ಅನುಭಾವ ಕಾರ್ಯಕ್ರಮ ಹಾಗೂ ಮೂಢನಂಬಿಕೆಗಳ ವಿರುದ್ಧ ಜಾಗೃತಿ ಮೂಡಿಸುವಂತಹ ಕಾರ್ಯಗಳನ್ನು ಮಠದ ವತಿಯಿಂದ ಹಮ್ಮಿಕೊಳ್ಳಲಾಗುತ್ತಿದೆ. ಮಠದ ಅಭಿವೃದ್ಧಿ ಮತ್ತು ಧಾರ್ಮಿಕ ಕಾರ್ಯಗಳು ಭಕ್ತರ ಸಹಕಾರದಿಂದ ನಡೆಯುತ್ತಿವೆ ಎಂದು ತಿಳಿಸಿದರು. ಅಂಬಾ ಮಠದ ತಾತನವರಾದ ನಾಮದೇವ ಗೌಡ ಶರಣರನ್ನು ಮದರ್‌ಕಲ್ ಗ್ರಾಮದ ಭಕ್ತರೇ



ಗೌರವದಿಂದ ಕರೆತಂದು ಮಠದಲ್ಲಿ ಇರಿಸಿದ್ದಾರೆ. ಶರಣರ ವಚನಗಳು ಹಾಗೂ ಧಾರ್ಮಿಕ ಸಂದೇಶಗಳನ್ನು ಸಾರುವ ಉದ್ದೇಶದಿಂದ ಅವರು ಮಠದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಅವರಲ್ಲಿ ಯಾವುದೇ ತಪ್ಪು ಕಂಡುಬಂದರೆ ಅವರನ್ನು ಕರೆತಂದ ಗ್ರಾಮದ ದೈವದ ಭಕ್ತರೇ ಸೂಕ್ತ ನಿರ್ಧಾರ ಕೈಗೊಳ್ಳುತ್ತಾರೆ. ಹೀಗಿರುವಾಗ ಹೊರಗಿನವರು ಯಾವುದೇ ಮಾಹಿತಿ ಇಲ್ಲದೆ ಆರೋಪ ಮಾಡುವುದು ಸರಿಯಲ್ಲ ಎಂದು ಹೇಳಿದರು.ಮಠ ಸ್ಥಾಪನೆಯಾಗಿರುವ ಸ್ಥಳದಲ್ಲಿ ಒಟ್ಟು 12 ಎಕರೆ ಸರ್ಕಾರಿ ಜಮೀನಿದೆ. ಈ ಪೈಕಿ ಎರಡು ಎಕರೆ ಜಮೀನನ್ನು ಮಠದ ಟ್ರಸ್ಟ್‌ಗೆ ಮಂಜೂರು ಮಾಡುವಂತೆ ಪಲಕನಮರಡಿ ಗ್ರಾಮ ಪಂಚಾಯಿತಿಯ ಸರ್ವಸದಸ್ಯರು ಸರ್ವಾನುಮತದಿಂದ ನಿರ್ಣಯ ಕೈಗೊಂಡು ಕಂದಾಯ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲು ಠರಾವು ಅಂಗೀಕರಿಸಿದ್ದಾರೆ ಎಂದು ಗ್ರಾಮ ಪಂಚಾಯಿತಿ ಸದಸ್ಯರಾದ ಮಾನಯ್ಯ ನಾಯಕ ಹಾಗೂ ಅಲಿಸಾಬು ಮದರ್‌ಕಲ್ ತಿಳಿಸಿದರು. ಮಠದ ಹೆಸರಿನಲ್ಲಿ ಮಾಡಲಾಗುತ್ತಿರುವ ಆರೋಪಗಳು ಸತ್ಯಕ್ಕೆ ದೂರವಾದವು ಎಂದು ಸ್ಪಷ್ಟಪಡಿಸಿದರು.

ದೈವದ ಇಚ್ಛೆಯಂತೆ ಮಠದ ಕಾರ್ಯಗಳು**ಈ ಸಂದರ್ಭದಲ್ಲಿ ಮದರ್‌ಕಲ್ ಗ್ರಾಮದ ದೇವಣ್ಣ ಮಾಲಿ ಪಾಟೀಲ್ ಮಾತನಾಡಿ, ಅಂಬಾ ಮಠವು ಮದರ್‌ಕಲ್ ಹಾಗೂ ಸುತ್ತಮುತ್ತಲಿನ ಗ್ರಾಮಗಳ ದೈವದ ಭಕ್ತರಿಗೆ ಸೇರಿದ ಮಠವಾಗಿದೆ. ಇಲ್ಲಿ ಯಾವುದೇ ವ್ಯಕ್ತಿಯ ವೈಯಕ್ತಿಕ ಇಚ್ಛೆಯಂತೆ ಕಾರ್ಯಗಳು ನಡೆಯುವುದಿಲ್ಲ. ಜನರ ಕಲ್ಯಾಣವೇ ಮಠದ ಮುಖ್ಯ ಉದ್ದೇಶವಾಗಿದೆ ಎಂದರು.ನಾಮದೇವ ಗೌಡ ಶರಣರು ಮಠಕ್ಕೆ ಬಂದ ನಂತರ ಜಾತಿ-ಭೇದವಿಲ್ಲದೆ ಎಲ್ಲರನ್ನೂ ಒಗ್ಗೂಡಿಸಿಕೊಂಡು ಗ್ರಾಮದ ಒಳಿತಿಗಾಗಿ ಕೆಲಸ ಮಾಡುತ್ತಿದ್ದಾರೆ. ಅವರ ಬಗ್ಗೆ ಸರಿಯಾದ ಮಾಹಿತಿ ತಿಳಿದುಕೊಳ್ಳದೆ ಸಾರ್ವಜನಿಕರಲ್ಲಿ ತಪ್ಪು ಸಂದೇಶ ಹರಡುವುದು ಸರಿಯಲ್ಲ ಎಂದು ಹೇಳಿದರು. ಹುಸೇನಸಾಬು ಟೆಂಟ್‌ಹೌಸ್ ಮಾತನಾಡಿ, ಇದು ಗ್ರಾಮದ ದೈವದ ಭಕ್ತರು ಒಗ್ಗೂಡಿ ಸ್ಥಾಪಿಸಿರುವ ಮಠವಾಗಿದೆ. ನಾಮದೇವ ಗೌಡ ಶರಣರ ಬಗ್ಗೆ ಗ್ರಾಮಸ್ಥರಲ್ಲಿ ಉತ್ತಮ ಅಭಿಪ್ರಾಯವಿದೆ. ಅವರ ಕುರಿತು ವಾಸ್ತವಾಂಶ ತಿಳಿಯದೆ ಹೊರಗಿನವರು ತಪ್ಪು ಸಂದೇಶ ನೀಡುತ್ತಿರುವುದು ಸರಿಯಲ್ಲ ಎಂದರು.ಮಾಜಿ ಗ್ರಾಮ ಪಂಚಾಯಿತಿ ಸದಸ್ಯ ಬಸವರಾಜ್ ಹೊಸೂರು ಮಾತನಾಡಿ, ಅಂಬಾ ಮಠದಲ್ಲಿ ನಾಮದೇವ ಗೌಡ ಶರಣ-ರ ನೇತೃತ್ವದಲ್ಲಿ ಉತ್ತಮ ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಗಳು ನಡೆಯುತ್ತಿವೆ ಎಂದು ತಿಳಿಸಿದರು.ಹಿರಿಯರಾದ ದುರ್ಗಪ್ಪ ಮಾತನಾಡಿ, ನಾಮದೇವ ಗೌಡ ಶರಣರನ್ನು ಗ್ರಾಮದವರು ಗೌರವದಿಂದ ಮಠಕ್ಕೆ ಕರೆತಂದು ಶರಣರ ಸ್ಥಾನದಲ್ಲಿ ಕೂರಿಸಿದ್ದಾರೆ. ಅವರು ಉತ್ತಮ ಸಂದೇಶಗಳನ್ನು ನೀಡುತ್ತಿದ್ದು, ಅವರ ಬಗ್ಗೆ ಗ್ರಾಮಸ್ಥರು ಅಭಿಮಾನ ಹೊಂದಿದ್ದಾರೆ ಎಂದರು.ಈ ಸಂದರ್ಭದಲ್ಲಿ ಮದರ್‌ಕಲ್ ಹಾಗೂ ಸುತ್ತಮುತ್ತಲಿನ ವಿವಿಧ ಸಮಾಜಗಳ ಹಿರಿಯರು, ಮುಖಂಡರು ಮತ್ತು ಅಂಬಾ ಮಠದ ಭಕ್ತರು ಉಪಸ್ಥಿತರಿದ್ದರು.

ಉಪಸ್ಥಿತರಿದ್ದವರು:** ಚಿನ್ನಪ್ಪ ದೊಡ್ಡಮನಿ, ದೇವಣ್ಣ ಮಾಲಿ ಪಾಟೀಲ್, ಸಾಹೇಬ್ ಗೌಡ ಪೊಲೀಸ್ ಪಾಟೀಲ್, ಶರಣಪ್ಪ ಮಾಲಿ ಪಾಟೀಲ್, ಮಾನಯ್ಯ, ಅಲ್ಲಿಸಾಬ್, ರಾಮಣ್ಣ ಉಪ್ಪಾರ್, ಬಸವರಾಜ್ ಹೊಸೂರು, ಹನುಮಂತ ಬಡಿಗೇರ್, ಮುದ್ದಣ್ಣ, ತಿಪ್ಪಣ್ಣ, ರವಿ, ಶಿವಗೇನಿ, ಶರಣಪ್ಪ ಹೊಸಮನಿ, ಚನ್ನಬಸವ ದೊಡ್ಡಮನಿ, ರಂಗಪ್ಪ ಮಲ್ಲಪ್ಪ ಅಸರತಿ, ನಿಂಗಪ್ಪ ಬಾಗೂರು, ದಾವಲ್‌ಸಾಬ್, ಬಸವರಾಜ್ ಮಾತ್ಪಳ್ಳಿ, ಶಿವಣ್ಣ ಉಪ್ಪಾರ್, ಗಣೇಶ್ ಬಾಂಬೆ, ಹುಸೇನ್ ಬಾಷಾ ಸೇರಿದಂತೆ ಮಠದ ಭಕ್ತರು ಭಾಗವಹಿಸಿದ್ದರು.

ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ**

ಬೆಲೆ ಏರಿಕೆಯ ಬಿಸಿ ನಡುವೆಯೂ ಕಂಪ್ಲಿ ಸೀಮೆಯಲ್ಲಿ ಜೋರಾದ ದೀಪಾವಳಿ ಸಡಗರ: ಹಬ್ಬದ ಖರೀದಿ ಭರಾಟೆ ಭರ್ಜರಿ

❑ ನೈಜ್ಯ ದೆಸೆ ನ್ಯೂಸ್

ಕಂಪ್ಲಿ:ಕತ್ತಲ ಸರಿಸಿ ಬೆಳಕ ತರುವ, ಕಷ್ಟಗಳ ನೀಗಿ ಹರ್ಷ ತುಂಬುವ ಸೀಮೆ ಹಬ್ಬ ದೀಪಾವಳಿ ಬಂತೆಂದರೆ ಸಾಕು, ನಮ್ಮ ಕಂಪ್ಲಿ ತಾಲೂಕಿನಾದ್ಯಂತ ಸಂಭ್ರಮದ ಹೊನಲೇ ಹರಿಯುತ್ತದೆ. ಹೌದು, ಈ ಬಾರಿ ಅಗತ್ಯ ವಸ್ತುಗಳ ಬೆಲೆ ಏರಿಕೆಯ ಬಿಸಿ ಜೋರಾಗಿಯೇ ತಟ್ಟಿದ್ದರೂ, ಕಂಪ್ಲಿ ಸೀಮೆಯ ಜನರ ಹಬ್ಬದ ಸಡಗರಕ್ಕಂತೂ ಯಾವುದೇ ಕಮ್ಮಿ ಆಗಿಲ್ಲ. “ಬೆಲೆ ಏರಿದರೇನಂತೆ, ವರ್ಷಕ್ಕೊಮ್ಮೆ ಬರೋ ಹಬ್ಬ ಬಿಡೋಕಾಗುತ್ತಾ?” ಎನ್ನುತ್ತಾ ಗ್ರಾಹಕರು ಮಾರುಕಟ್ಟೆಗೆ ಲಗ್ಗೆ ಇಟ್ಟಿದ್ದು, ಇಡೀ ಪಟ್ಟಣದಲ್ಲಿ ಹಬ್ಬದ ಕಳೆ ಗರಿಗೆದರಿದೆ.ಪಟಾಕಿ ಮಳಿಗೆಗಳಲ್ಲಿಚಿಣ್ಣರ ಸಡಗರ, ಹಿರಿಯರ ದಂಡು*ಪಟ್ಟಣದ ವಾಲ್ಮೀಕಿ ವೃತ್ತದ ಬಳಿ ಇರುವ ವಿಶಾಲವಾದ ಮೈದಾನದಲ್ಲಿ ಭಾನುವಾರ ಇಡೀ ದಿನ ಜನವೋ ಜನ, ಹಬ್ಬಕ್ಕೆ ಬಣ್ಣ ಬಣ್ಣದ ಬೆಳಕಿನ ಚಿತ್ತಾರ ಮೂಡಿಸಲು ಇಲ್ಲಿ ಸಾಲು ಸಾಲು ಪಟಾಕಿ ಮಳಿಗೆಗಳನ್ನು ತೆರೆಯಲಾಗಿದ್ದು, ಗ್ರಾಹಕರು ತಂಡೋಪತಂಡವಾಗಿ ಧಾವಿಸುತ್ತಿದ್ದಾರೆ. ಕೈಯಲ್ಲಿ ಪುಟ್ಟ ಮಕ್ಕಳನ್ನು ಹಿಡಿದು, ಕುಟುಂಬ ಸಮೇತ ಬಂದ ಹಿರಿಯರು ತರಹೇವಾರಿ ಪಟಾಕಿಗಳನ್ನು ಚೌಕಾಸಿ ಮಾಡಿ ಆನಂದದಿಂದ ಖರೀದಿಸುತ್ತಿದ್ದ ದೃಶ್ಯ ಮೈದಾನದುದ್ದಕ್ಕೂ ಕಂಡುಬಂತು. ಈ ಬಾರಿ ಪರಿಸರ ಸ್ನೇಹಿ ಹಸಿರು ಪಟಾಕಿಗಳಿಗೂ ಹೆಚ್ಚಿನ ಬೇಡಿಕೆ ಕಂಡುಬಂದಿದ್ದು, ಚಿಣ್ಣರ ಮುಖದಲ್ಲಿ ಹಬ್ಬದ ಖುಷಿ ಎದ್ದು ಕಾಣುತ್ತಿತ್ತು. ಹೂವು-ಹಣ್ಣಿನ *ಮಾರುಕಟ್ಟೆಯಲ್ಲಿ ಹಬ್ಬದ ಸಡಗರ:*ಇನ್ನೊಂದೆಡೆ, ಪಟ್ಟಣದ ಪ್ರಮುಖ ಕೇಂದ್ರಗಳಾದ ಕಡಲು ಮಸೀದಿ ವೃತ್ತ, ಪೇಟೆ ಬಸವೇಶ್ವರ ದೇವಸ್ಥಾನದ ಮುಂಭಾಗ, ಪುರಸಭೆ ಆವರಣ ಹಾಗೂ ಅಂಬೇಡ್ಕರ್ ವೃತ್ತದ ಸುತ್ತಮುತ್ತಲಿನ ಹೂವಿನ ಮಾರುಕಟ್ಟೆಗಳಲ್ಲಿ





ಕಾಲಿಡಲು ಜಾಗವಿಲ್ಲದಷ್ಟು ಜನಸಂದಣಿ ನೆರೆದಿದೆ. ಮಾರಮ್ಮನ ದೇವಸ್ಥಾನದ ಆಸುಪಾಸಿನ ಗಿಜಿಗುಡುವ ರಸ್ತೆಗಳಲ್ಲಿ ಹೆಣ್ಣುಮಕ್ಕಳು ಸಾಲು ಸಾಲಾಗಿ ನಿಂತು ಧನಲಕ್ಷ್ಮಿ ಪೂಜೆಗೆ ಬೇಕಾದ ಹೂವು, ಹಣ್ಣು, ವೀಳ್ಯದೆಲೆ, ಆಲದ ಎಲೆ ಹಾಗೂ ಪೂಜಾ ಸಾಮಗ್ರಿಗಳನ್ನು ಉತ್ಸಾಹದಿಂದ ಆಯ್ದುಕೊಳ್ಳುತ್ತಿದ್ದಾರೆ. ಬಣ್ಣ ಬಣ್ಣದ ರಂಗೋಲಿ ಪುಡಿ ಹಾಗೂ ಸಾಂಪ್ರದಾಯಿಕ ಮಣ್ಣಿನ ಹಣತೆಗಳ ಮಾರಾಟವೂ ಜೋರಾಗಿದೆ. ಹೊಸಬಟ್ಟೆಗಳ ಜವಳಿ ಅಂಗಡಿಗಳ ಮುಂದೂ ಗ್ರಾಹಕರ ಸಾಲು ದಟ್ಟವಾಗಿದೆ.ಬೆಲೆ ಏರಿಕೆಯ ಚುರುಕು, ಸಂಪ್ರದಾಯದ ಅನಿವಾರ್ಯತೆ:ಈ ದೀಪಾವಳಿಗೆ ಮಾರುಕಟ್ಟೆಯಲ್ಲಿ ಹೂವು, ಹಣ್ಣು, ದಿನಸಿ ಪದಾರ್ಥಗಳು ಹಾಗೂ ತರಕಾ-ರಿಗಳ ಬೆಲೆ ಆಕಾಶ ಮುಟ್ಟಿದೆ. ಅದರಲ್ಲೂ ಹಬ್ಬದ ಪೂಜೆಗೆ ಅತಿ ಮುಖ್ಯವಾದ ಸೇವಂತಿ, ಕನಕಾಂಬರ, ಮಲ್ಲಿಗೆ ಹಾಗೂ ಚೆಂಡುಹೂವುಗಳ ಬೆಲೆ ಕೇಳಿದರೆ ಗ್ರಾಹಕರು ಒಂದು ಕ್ಷಣ ಬೆಚ್ಚಿಬೀಳುವಂತಾಗಿದೆ. ಸಾಮಾನ್ಯ ದಿನಗಳಿಗಿಂತ ಮೂರು-ನಾಲ್ಕು ಪಟ್ಟು ದರ ಹೆಚ್ಚಾಗಿದ್ದು, ಬಡ ಹಾಗೂ ಮಧ್ಯಮ ವರ್ಗದ ಜೇಬಿಗೆ ಕತ್ತರಿ ಬಿದ್ದಂತಾಗಿದೆ. "ಬೆಲೆ ಏರಿಕೆ ಗ್ರಾಹಕರ ಮನಸ್ಸಿಗೆ ಸ್ವಲ್ಪ ಬೇಸರ ತಂದಿರುವುದು ನಿಜ. ಆದರೆ, ಹಿರಿಯರು ತಂದಿಟ್ಟ ಸಾಂಪ್ರದಾಯಿಕ ಆಚ-'ರಣೆಯನ್ನು ಬಿಡಲು ಹೇಗೆ ಸಾಧ್ಯ? ಶಕ್ತ್ಯಾನುಸಾರ ಅಷ್ಟೋ ಇಷ್ಟೋ ಖರೀದಿಸಲೇಬೇಕು" ಎನ್ನುತ್ತಾರೆ ಸ್ಥಳೀಯ ಗ್ರಾಹಕರು.ವ್ಯಾಪಾ-ರಿಗಳ ಮುಖದಲ್ಲಿ ಮಂದಹಾಸ:*ಕಳೆದ ಕೆಲವು ದಿನಗಳಿಂದ ಮಾರುಕಟ್ಟೆಯಲ್ಲಿ ವ್ಯಾಪಾರ ಕೊಂಚ ಮಂದಗತಿಯಲ್ಲಿ ಸಾಗಿತ್ತು. ಆದರೆ ಭಾನುವಾರ ರಜೆ ದಿನವಾಗಿದ್ದರಿಂದ ಹಾಗೂ ಹಬ್ಬ ತೀರಾ ಹತ್ತಿರವಿರುವುದರಿಂದ ಮಾರುಕಟ್ಟೆಗೆ ಗ್ರಾಹಕರ ಹರಿವು ದಿಢೀರ್ ಹೆಚ್ಚಾಗಿದೆ. ಇದ-ರಿಂದಾಗಿ ಕಂಪ್ಲಿ ಪಟ್ಟಣದ ಸಣ್ಣ ಹಾಗೂ ದೊಡ್ಡ ವ್ಯಾಪಾರಿಗಳ ಮುಖದಲ್ಲಿ ಕೊನೆಗೂ ಮಂದಹಾಸ ಮೂಡಿದೆ.ಬೆಲೆ ಏರಿಕೆಯ ಕಹಿಯ ನಡುವೆಯೂ, ಮಾರುಕಟ್ಟೆಯಲ್ಲಿ ಹಬ್ಬದ ಸಂಭ್ರಮದ ಸಿಹಿಯೇ ಮೇಲುಗೈ ಸಾಧಿಸಿದೆ. ಕಂಪ್ಲಿ ತಾಲೂಕಿನ ಜನತೆ ಆರ್ಥಿಕ ಸವಾಲುಗಳ ನಡುವೆಯೂ ದೀಪಾವಳಿಯನ್ನು ಅತ್ಯಂತ ಸಡಗರ, ಸೌಹಾರ್ದತೆ ಮತ್ತು ನವೋಲ್ಲಾಸದಿಂದ

ಬರಮಾಡಿಕೊಳ್ಳಲು ಸನ್ನದ್ಧರಾಗಿದ್ದಾರೆ.

ವಿಶೇಷ ಲೇಖನ ವರದಿ : ಜಿಲಾನಸಾಬ್ ಬಡಿಗೇರ್

ಈ ದಿನದ ವಿಶೇಷ

1)ರಾಷ್ಟ್ರೀಯ ಕಾನೂನು ಸೇವೆಗಳ ದಿನ (National Legal Services Day): ಸಮಾಜದ ಹಿಂದುಳಿದ ವರ್ಗಗಳಿಗೆ ಉಚಿತ ಕಾನೂನು ನೆರವು ಮತ್ತು ಜಾಗೃತಿ ಮೂಡಿಸಲು ಭಾರತದಲ್ಲಿ ಪ್ರತಿವರ್ಷ ನವೆಂಬರ್ 9 ರಂದು ಇದನ್ನು ಆಚರಿಸಲಾಗುತ್ತದೆ

2) ವಿಶ್ವ ಸ್ವಾತಂತ್ರ್ಯ ದಿನ (World Freedom Day): 1989ರಲ್ಲಿ ಬರ್ಲಿನ್ ಗೋಡೆಯ ಪತನವನ್ನು ಸ್ಮರಿಸುತ್ತಾ, ದಬ್ಬಾಳಿಕೆಯ ಮೇಲೆ ಸ್ವಾತಂತ್ರ್ಯದ ವಿಜಯದ ಸಂಕೇತವಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಆಚರಿಸಲಾಗುತ್ತದೆ.

3) ಉತ್ತರಾಖಂಡ ದಿನ (Uttarakhand Day): 2000ನೇ ಇಸವಿಯಲ್ಲಿ ಉತ್ತರಾಖಂಡ ರಾಜ್ಯವು ಹುಟ್ಟಿಕೊಂಡ ದಿನದ ನೆನಪಿಗಾಗಿ ಪ್ರತಿವರ್ಷ ಈ ದಿನವನ್ನು ಅಲ್ಲಿ ಆಚ-ರಿಸಲಾಗುತ್ತದೆ.

4)ಕಾಂಬೋಡಿಯಾದ ಸ್ವಾತಂತ್ರ್ಯ ದಿನ: 1953ರಲ್ಲಿ ಫ್ರಾನ್ಸ್‌ನಿಂದ ಕಾಂಬೋಡಿಯಾ ಸ್ವಾತಂತ್ರ್ಯ ಪಡೆದ ದಿನ.

5)ಧಾರ್ಮಿಕ ಮತ್ತು ಸ್ಥಳೀಯ ವಿಶೇಷತೆಗಳು: ಈ ದಿನ ದೀಪಾವಳಿ ಅಮಾವಾಸ್ಯೆ ಹಾಗೂ ಕಲಬುರಗಿ ಜಿಲ್ಲೆಯ ಜೇವರ್ಗಿ ತಾಲೂಕಿನ ಕಾಚಾಪುರದಲ್ಲಿ ಪ್ರಸಿದ್ಧವಾದ 'ಜಟ್ ಪಟ್ ಪಟಾಕಿ ಜಾತ್ರೆ' ನಡೆಯುತ್ತದೆ.

ಸುಭಾಷಿತ

ಅಸೂಯೆ, ಅಹಂಕಾರ ಮತ್ತು ದ್ವೇಷಗಳಿಂದ ನಮ್ಮ ಮನಸ್ಸನ್ನು ಕೆಡಿಸಬಾರದು. ಅಂತರಂಗವನ್ನು ಸ್ವಚ್ಛಗೊಳಿಸಿದರೆ ಮಾತ್ರ ಅಮೃತ ಫಲ ಪಡೆಯಲು ಸಾಧ್ಯ.

-ಶ್ರೀ ಸಿದ್ಧೇಶ್ವರ ಸ್ವಾಮೀಜಿ

ಸಾಹಿತ್ಯ ಸಿಂಚನ

ಬೆಳಕಿನ ಹಬ್ಬ ದೀಪಾವಳಿ

ದೀಪವ ಹಚ್ಚೋಣ
ದೀಪವ ಹಚ್ಚೋಣ
ಮನೆ ಮನೆಗಳಲ್ಲಿ
ದೀಪವ ಹಚ್ಚೋಣ......

ಕುಂಬಾರಣ್ಣನ ಮಾಡಿದ
ಹಣತೆಯ ದೀಪವ ಹಚ್ಚೋಣ

ರೈತರು ಬೆಳೆದ ಹತ್ತಿಯ ಬತ್ತಿಯ
ದೀಪವ ಹಚ್ಚೋಣ......

ರೈತರು ಬೆಳೆದ ಎಣ್ಣೆ ಕಾಳಿನ
ಎಣ್ಣೆಯೊಂದಿಗೆ ದೀಪವ ಹಚ್ಚೋಣ......

ಕೃತಕ ದೀಪಗಳ ಬದಲು ಪ್ರಕೃತಿ ದೀಪಗಳನ್ನು
ಹಚ್ಚೋಣ....
ಭೇದ ಭಾವವಿಲ್ಲದೆ ಹಣತೆಯ ದೀಪಕೆ ದೀಪದಿಂದ
ದೀಪಗಳ ಹಚ್ಚೋಣ.......

ಭರತನಾಡಿನ ಕರುನಾಡಿನಲ್ಲಿ ಹಣತೆಯೊಂದಿಗೆ
ಸುಜ್ಞಾನದ ದೀಪವ ಹಚ್ಚೋಣ.......
ಸರ್ವರು ಸಹ ಬಾಳ್ವೆಯೊಂದಿಗೆ ಪ್ರೀತಿಯ ಹಣತೆಯ
ದೀಪವ ಹಚ್ಚೋಣ..........

ಹಣತೆಗಳ ದೀಪ ಹಚ್ಚಿ
ಬೆಳಕಿನ ಹಬ್ಬ ದೀಪಾವಳಿ ಆಚರಿಸೋಣ

ಮಲ್ಲಿಕಾರ್ಜುನ .ಸಿ.
ಉದ್ಬಾಳ(ಯು) 8884981106



ನೇಮಕಾತಿ ಪ್ರಕಟಣೆ

ಶಿವಮೊಗ್ಗ ಮಹಾನಗರ ಪಾಲಿಕೆ ನೇಮಕಾತಿ 2026 – 45 ಪೌರಕಾರ್ಮಿಕ ಹುದ್ದೆಗಳಿಗೆ ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ. ಶಿವಮೊಗ್ಗ ಮಹಾನಗರ ಪಾಲಿಕೆ ನೇಮಕಾತಿ 2026: 45 ಪೌರಕಾರ್ಮಿಕ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಶಿವಮೊಗ್ಗ ಮಹಾನಗರ ಪಾಲಿಕೆಯು ಅಕ್ಟೋಬರ್ 2026ರ ಅಧಿಕೃತ ಅಧಿಸೂಚನೆಯ ಮೂಲಕ, ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಪೌರಕಾರ್ಮಿಕ ಹುದ್ದೆಗಳನ್ನು ಭರ್ತಿ ಮಾಡಲು ಅರ್ಜಿಗಳನ್ನು ಕೋರಿದೆ. ಕರ್ನಾಟಕ ಸರ್ಕಾರದ ಅಧೀನದಲ್ಲಿರುವ ಶಿವಮೊಗ್ಗ ಮಹಾನಗರ ಪಾಲಿಕೆಯಲ್ಲಿ ಉದ್ಯೋಗವನ್ನು ಹುಡುಕುತ್ತಿರುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 09–ನವೆಂಬರ್–2026 ರಂದು ಅಥವಾ ಅದಕ್ಕೂ ಮೊದಲು ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಸಂಸ್ಥೆಯ ಹೆಸರು: ಶಿವಮೊಗ್ಗ ಮಹಾನಗರ ಪಾಲಿಕೆ ಹುದ್ದೆಗಳ ಸಂಖ್ಯೆ: 45 ಉದ್ಯೋಗ ಸ್ಥಳ: ಶಿವಮೊಗ್ಗ – ಕರ್ನಾಟಕ ಹುದ್ದೆಯ ಹೆಸರು: ಪೌರಕಾರ್ಮಿಕ ವೇತನ: ತಿಂಗಳಿಗೆ ರೂ. 27,000 – 46,675/– ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 10–ನವೆಂಬರ್–2026. ಅಧಿಕೃತ ವೆಬ್‌ಸೈಟ್: **shivamoggacitycorp.org.**

ಪೊಲೀಸ್ ಸಮವಸ್ತ್ರಕ್ಕೆ ಸೇವಾ ಹಿರಿತನದ ಬ್ಯಾಡ್ಜ್: ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಮೋಹನ್ ಕುಮಾರ್ ಪ್ರಸ್ತಾವನೆ

❑ ನೈಜ್ಯ ದೆಸೆ ನ್ಯೂಸ್



ಕಂಪ್ಲಿ : ಪೊಲೀಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ ಸೇವಾ ಹಿರಿತನ ಸುಲಭವಾಗಿ ಗುರುತಿಸಲು ಸಮವಸ್ತ್ರದ ಮೇಲೆ ವಿಶೇಷ ಬ್ಯಾಡ್ಜ್ ಅಳವಡಿಸುವಂತೆ ರಾಜ್ಯ ಪೊಲೀಸ್ ದೂರು ಪ್ರಾಧಿಕಾರದ ಸದಸ್ಯ ಮೋಹನ್ ಕುಮಾರ್ ದಾನಪ್ಪ ಸರ್ಕಾರಕ್ಕೆ ಮನವಿ ಮಾಡಿದ್ದಾರೆ. ಈ ಸಂಬಂಧ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿರುವ ಅವರು, ಪೊಲೀಸ್ ಇಲಾಖೆಯಲ್ಲಿ ದೀರ್ಘಕಾಲ ಸೇವೆ ಸಲ್ಲಿಸಿರುವ ಅಧಿಕಾರಿಗಳ ಅನುಭವ ಮತ್ತು ಸರ್ಕಾರಕ್ಕೆ ಸೇವಾ ಹಿರಿತನಕ್ಕೆ ಸೂಕ್ತ ಮನ್ನಣೆ ನೀಡುವಂತೆ ಪ್ರಸ್ತಾಪಿಸಿದ್ದಾರೆ.ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುವ ಅಧಿಕಾರಿಗಳ ಸೇವಾ ಅನುಭವ, ಜವಾಬ್ದಾರಿ ಹಾಗೂ ಹಿರಿತನವನ್ನು ಸಾರ್ವಜನಿಕರು ಮತ್ತು ಇಲಾಖೆಯ ಇತರ ಸಿಬ್ಬಂದಿ ಸುಲಭವಾಗಿ ಗುರುತಿಸುವಂತಾಗಬೇಕು. ಇದರಿಂದ ಪೊಲೀಸ್ ಇಲಾಖೆಯಲ್ಲಿ ಶಿಸ್ತು, ಗೌರವ ಹಾಗೂ ಆಡಳಿತಾತ್ಮಕ ವ್ಯವಸ್ಥೆ ಮತ್ತಷ್ಟು ಪರಿಣಾಮಕಾರಿಯಾಗಲಿದೆ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ವಿಶೇಷವಾಗಿ ಐಪಿಎಸ್ ಅಧಿಕಾರಿಗಳಲ್ಲದ ಪೊಲೀಸ್ ಅಧಿಕಾ–ರಿಗಳ ಸೇವಾ ಅವಧಿಯನ್ನು ಆಧರಿಸಿ ಅವರಿಗೆ ಪ್ರತ್ಯೇಕ ಗುರುತಿನ ಬ್ಯಾಡ್ಜ್‌ಗಳನ್ನು ನೀಡುವ ಪ್ರಸ್ತಾವನೆ ಮುಂದಿಟ್ಟಿದ್ದಾರೆ. ಅದರಂತೆ, 5 ವರ್ಷ ಸೇವೆ ಸಲ್ಲಿಸಿದವರಿಗೆ 'ಸೀನಿಯರ್', 10 ವರ್ಷ ಸೇವೆ ಸಲ್ಲಿಸಿದವರಿಗೆ 'ಸೂಪರ್ ಸೀನಿಯರ್' ಹಾಗೂ 15 ವರ್ಷ ಸೇವೆ ಸಲ್ಲಿಸಿದವರಿಗೆ 'ಮೋಸ್ಟ್ ಸೀನಿಯರ್' ಎಂಬ ಗುರುತಿನ ಬ್ಯಾಡ್ಜ್‌ಗಳನ್ನು ಸಮವಸ್ತ್ರದ ಮೇಲೆ ಅಳವಡಿಸುವಂತೆ ಸಲಹೆ ನೀಡಿದ್ದಾರೆ.ವರದಿ : ಜಿಲಾನಸಾಬ್ ಬಡಿಗೇರ್

ದೀಪಾವಳಿ

❑ ನೈಜ್ಯ ದೆಸೆ ನ್ಯೂಸ್

ಬಂತೋ.. ಬಂತೋ.. ದೀಪಾವಳಿ ಬಂತೋ..
ತಂತೋ.. ತಂತೋ.. ಸಡಗರ ತಂತೋ..
ಸಿರಿ ತಂದಿತಪ್ಪ ಈ ಬೆಳಕಿನ ಹಬ್ಬ
ಸಂತಸದ ರೂಪ ಈ ದೀಪಾವಳಿ ಹಬ್ಬ
ಮನೆಯ ಅಂಗಳದಿ ಬಣ್ಣದ ರಂಗೋಲಿ
ಮನೆಯ ಬಾಗಿಲು ಮಾವಿನ ತೋರಣ
ಸಾಲು ಸಾಲು ಹಣತೆಯ ದೀಪ
ಅಂಗಳ ತುಂಬಿ ಬೆಳಗಿತೇ ದೀಪ
ಊರ ತುಂಬೇಲ್ಲಾ ಹೆಣಟಿಜಜಜಿಟಿಜಜಸತು ನೋಡಾ
ನಾಡಿನ ಜನದ ಹಿಗ್ಗು ನೋಡಾ
ಹಬ್ಬದ ಸಿರಿಗೆ ತುಪ್ಪದ ಘಮ ಘಮ
ಹಸಿರಿನ ಗರಿಗೆ ಸಂಭ್ರಮದ ಸಮ ಸಮ
ಹರಿಯುವ ನೀರಲ್ಲಿ ತಲೆ ಎಣ್ಣೆ ಸ್ನಾನ
ನಾರಿಯರ ಮುಡಿ ತುಂಬ ಮಲ್ಲಿಗೆ
ತರ ತರಹದ ಪಟಾಕಿ
ಬೆಳಕು ಬೀರಿ ಸಿಡಿಯುತ್ತೆ
ದೀಪಗಳ ಸಾಲು ಈ ದೀಪಾವಳಿ ಹಬ್ಬ
ಸಂತಸದ ರೂಪ ಈ ದೀಪಾವಳಿ ಹಬ್ಬ.

– ವಿ.ಎಂ.ಎಸ್.ಗೋಪಿ
ಲೇಖಕರು, ಸಾಹಿತಿಗಳು
ಬೆಂಗಳೂರು.





ದರ್ವೇಶ್ ಅಲೆಮಾರಿ ಹಾಗೂ ಅರೆ ಅಲೆಮಾರಿ ಜನಾಂಗದ ಅಭಿವೃದ್ಧಿಗೆ ಸಂಘಟಿತ ಹೋರಾಟ ಅಗತ್ಯ: ತಾಲೂಕು ಅಧ್ಯಕ್ಷರ ನೇಮಕ

❑ ನೈಜ್ಯ ದೆಸೆ ನ್ಯೂಸ್



ಸಿಂಧನೂರು ನ 08 :ಕಲ್ಯಾಣ ಕರ್ನಾಟಕ ದರ್ವೇಶ್ ಅಲೆಮಾರಿ ಹಾಗೂ ಅರೆ ಅಲೆಮಾರಿ ಜನಾಂಗದ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಸಂಘಟನೆಯನ್ನು ತಾಲೂಕು ಮಟ್ಟದಲ್ಲಿ ಬಲಪಡಿಸುವ ಉದ್ದೇಶದಿಂದ ತಾಲೂಕು ಅಧ್ಯಕ್ಷರನ್ನು ನೇಮಕ ಮಾಡುವ ಕಾರ್ಯಕ್ರಮದ ಅಂಗವಾಗಿ ಇಂದು ಸಾಗರದ ಪತ್ರಿಕಾ ಭವನದಲ್ಲಿ ಪತ್ರಿಕಾಗೋಷ್ಠಿ ನಡೆಸಲಾಯಿತು. ದರ್ವೇಶ್ ಅಲೆಮಾರಿ ಹಾಗೂ ಅರೆ ಅಲೆಮಾರಿ ಜನಾಂಗವು ಇಂದಿಗೂ ಶೈಕ್ಷಣಿಕ, ಆರ್ಥಿಕ ಮತ್ತು ವೈದ್ಯಕೀಯ ಕ್ಷೇತ್ರಗಳಲ್ಲಿ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದೆ. ಈ ಜನಾಂಗದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ದೊರೆಯಬೇಕು, ಬಡ ಕುಟುಂಬಗಳಿಗೆ ಸರ್ಕಾರದ ವಿವಿಧ ಸೌಲಭ್ಯಗಳು ತಲುಪಬೇಕು ಹಾಗೂ ನಿರ್ಗತಿಕರಿಗೆ ಅಗತ್ಯ ವೈದ್ಯಕೀಯ ನೆರವು ದೊರೆಯಬೇಕು ಎಂಬುದು ಸಂಘದ ಪ್ರಮುಖ ಉದ್ದೇಶವಾಗಿದೆ ಎಂದು ಸಂಘದ ಪದಾಧಿಕಾರಿಗಳು ತಿಳಿಸಿದರು.ಈ ನಿಟ್ಟಿನಲ್ಲಿ ತಾಲೂಕು ಅಧ್ಯಕ್ಷರಾಗಿ ನೇಮಕಗೊಳ್ಳುವವರು ಪ್ರಾಮಾಣಿಕವಾಗಿ ಸಮಾಜ ಸೇವೆ ಸಲ್ಲಿಸುವುದರ ಜೊತೆಗೆ ಜನಾಂಗದ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸಬೇಕು ಎಂದು ಆಶಯ ವ್ಯಕ್ತಪಡಿಸಿದರು.ಸಂಘದಲ್ಲಿ ಯಾವುದೇ ಜಾತಿ, ಧರ್ಮ ಹಾಗೂ ರಾಜಕೀಯ ಪಕ್ಷಗಳ ಭೇದಭಾವವಿಲ್ಲದೆ ಸಮಾಜದ ಏಳಿಗೆಗಾಗಿ ಎಲ್ಲರೂ ಒಗ್ಗಟ್ಟಿನಿಂದ ಕಾರ್ಯನಿರ್ವಹಿಸಬೇಕು. ಸಂಘಟನೆಯ ಮೂಲಕ ಜನಾಂಗದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಮತ್ತು ಸರ್ಕಾರದ ಗಮನ ಸೆಳೆಯಲು ನಿರಂತರ ಹೋರಾಟ ನಡೆಸಲಾಗುವುದು. ನಮ್ಮ ಸಂಘಟನೆ ನಮ್ಮ ಶಕ್ತಿ, ನಮ್ಮ ಒಗ್ಗಟ್ಟು ನಮ್ಮ ಜನಾಂಗದ ಅಭಿವೃದ್ಧಿಗೆ ಮುನ್ನಡಿ ಎಂದು ಹೇಳಿದರು.ಪತ್ರಿಕಾಗೋಷ್ಠಿಯ ಮುಖ್ಯ ಉದ್ದೇಶ ತಾಲೂಕು ಅಧ್ಯಕ್ಷರ ನೇಮಕಾತಿ ಘೋಷಣೆ, ತಾಲೂಕು ಮಟ್ಟದಲ್ಲಿ ಸಂಘಟನೆಯನ್ನು ಬಲಪಡಿಸುವುದು, ಅಲೆಮಾರಿ ಹಾಗೂ ಅರೆ ಅಲೆಮಾರಿ ಜನಾಂಗದ ಶೈಕ್ಷಣಿಕ, ಆರ್ಥಿಕ ಮತ್ತು ವೈದ್ಯಕೀಯ ಸೌಲಭ್ಯಗಳಿಗಾಗಿ ಹೋರಾಟ ರೂಪಿಸುವುದು ಹಾಗೂ ಸಂಘದ ಮುಂದಿನ ಕಾರ್ಯಯೋಜನೆಗಳನ್ನು ಮಾಧ್ಯಮಗಳ ಮೂಲಕ ಜನರಿಗೆ ತಿಳಿಸುವುದಾಗಿದೆ.ಈ ಸಂದರ್ಭದಲ್ಲಿ ಸಂಘದ ಜಿಲ್ಲಾಧ್ಯಕ್ಷರಾದ ರಹೀಂ ಶಾ ಮಕಾಂದಾರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಮೋಹಿನುದ್ದೀನ್ ಬಂಡಾರಿ, ಸಿಂಧನೂರು ತಾಲೂಕು ಅಧ್ಯಕ್ಷರಾಗಿ ನೇಮಕಗೊಂಡ ಮಸ್ತಾನ್, ಜಿಲ್ಲಾ ಉಪಾಧ್ಯಕ್ಷರಾದ ಎಂ.ಆರ್. ಮಹಿಬೂಬ್ ಪಾಷಾ, ಜಿಲ್ಲಾ ಖಜಾಂಚಿಗಳಾದ ಬಾಹುಮಿಯ ಹಾಗೂ ತಾಲೂಕು ಸದಸ್ಯರಾದ ಅನ್ವರ್ ಪಾಷಾ ಉಪಸ್ಥಿತರಿದ್ದರು.

ಬಯಲಲ್ಲೇ ನಡೆಯುತ್ತಿರುವ ಅಂಗನವಾಡಿ ಕೇಂದ್ರ: ಮಕ್ಕಳ ಸ್ಥಿತಿ ಚಿಂತಾಜನಕ; ಅಧಿಕಾರಿಗಳ ವಿರುದ್ಧ ಗ್ರಾಮಸ್ಥರ ಆಕ್ರೋಶ!

ಮರದ ನೆರಳಲ್ಲೇ ಮಕ್ಕಳಿಗೆ ಪಾಠ; ಕುಡಿಯುವ ನೀರು, ಶೌಚಾಲಯವೂ ಇಲ್ಲ – ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಗ್ರಾಮಸ್ಥರ ಕಿಡಿ

❑ ನೈಜ್ಯ ದೆಸೆ ನ್ಯೂಸ್



ಸಿರವಾರ: ತಾಲೂಕಿನ ಸಮೀಪದ ನವಲಕಲ್ ಗ್ರಾಮದ ಎರಡನೇ ಅಂಗನವಾಡಿ ಕೇಂದ್ರದಲ್ಲಿ ಮೂಲಸೌಕರ್ಯಗಳ ಕೊರತೆಯಿಂದ ಪುಟಾಣಿ ಮಕ್ಕಳಿಗೆ ತೀವ್ರ ತೊಂದರೆಯಾಗುತ್ತಿದೆ. ಸೂಕ್ತ ಕಟ್ಟಡ, ಕುಡಿಯುವ ನೀರು ಹಾಗೂ ಶೌಚಾಲಯದ ವ್ಯವಸ್ಥೆಯಿಲ್ಲದೆ ಮಕ್ಕಳು ಮರದ ನೆರಳಿನಲ್ಲೇ ಕಲಿಯುವ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಗಂಭೀರ ಸಮಸ್ಯೆಯ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಹಲವು ಬಾರಿ ತಿಳಿಸಿದರೂ ಯಾವುದೇ ಕ್ರಮ ಕೈಗೊಳ್ಳದಿರುವುದು ಗ್ರಾಮಸ್ಥರ ಆಕ್ರೋಶಕ್ಕೆ ಕಾರಣವಾಗಿದೆ.ನವಲಕಲ್ ಗ್ರಾಮದ ಎರಡನೇ ಅಂಗನವಾಡಿ ಕೇಂದ್ರವು ಹಲವು ವರ್ಷಗಳಿಂದ ಸಣ್ಣ ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿತ್ತು. ಆದ–'ರೆ, ಅಂಗನವಾಡಿ ಕಾರ್ಯಕರ್ತೆ ನಾಗವೇಣಿ ಅವರು ಗ್ರಾಮಸ್ಥರ ಗಮನಕ್ಕೆ ತರದೆ ಕೇಂದ್ರವನ್ನು ಏಕಾಏಕಿ ತೊರೆದು ಬೇರೆ ಅಂಗನವಾಡಿ ಕೇಂದ್ರಕ್ಕೆ ಸ್ಥಳಾಂತರಗೊಂಡಿದ್ದಾರೆ ಎನ್ನಲಾಗಿದೆ. ಆದರೆ, ಸ್ಥಳಾಂತರಗೊಂಡ ಬಳಿಕವೂ ಮಕ್ಕಳಿಗೆ ಪಾಠ ಕಲಿಸಲು ಸೂಕ್ತ ಕಟ್ಟಡದ ವ್ಯವಸ್ಥೆಯಾಗದೆ ಮರದ ನೆರಳಿನಲ್ಲೇ ಅಂಗನವಾಡಿ ನಡೆಸುವ ಪರಿಸ್ಥಿತಿ ಎದುರಾಗಿದೆ.ಈ ಸಮಸ್ಯೆಯನ್ನು ಹಲವು ಬಾರಿ ಶಿಶು ಅಭಿವೃದ್ಧಿ ಯೋಜನಾಧಿಕಾರಿ ವಿರೂಪಾಕ್ಷಯ್ಯ ಸ್ವಾಮಿ ಅವರ ಗಮನಕ್ಕೆ ಪತ್ರಿಕಾ ಮಾಧ್ಯಮದವರು, ಕರ್ನಾಟಕ ರಕ್ಷಣಾ ವೇದಿಕೆಯ ತಾಲೂಕು ಕಾರ್ಯಾಧ್ಯಕ್ಷರು ಹಾಗೂ ಗ್ರಾಮಸ್ಥರು ತಂದಿದ್ದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಆರೋಪಿಸಲಾಗಿದೆ.ಮಕ್ಕಳ ಸುರಕ್ಷತೆ ಮತ್ತು ಶಿಕ್ಷಣದ ವಿಚಾರದಲ್ಲಿ ಅಧಿಕಾರಿಗಳು ಹೆಚ್ಚಿನ ಜವಾಬ್ದಾರಿಯಿಂದ ನಡೆದುಕೊಳ್ಳಬೇಕಿದೆ. ಗ್ರಾಮಕ್ಕೆ ಭೇಟಿ ನೀಡಿ ಹಿರಿಯರೊಂದಿಗೆ ಚರ್ಚಿಸಿ ಸೂಕ್ತ ಕಟ್ಟಡ ಹಾಗೂ ಅಗತ್ಯ ಮೂಲಸೌಕರ್ಯ ಕಲ್ಪಿಸಬೇಕಾಗಿತ್ತು. ಆದ–'ರೆ, ಈವರೆಗೆ ಯಾವುದೇ ಶಾಶ್ವತ ಪರಿಹಾರ ದೊರೆಯದಿರುವುದು ಖಂಡನೀಯ ಎಂದು ಕರ್ನಾಟಕ ರಕ್ಷಣಾ ವೇದಿಕೆ ತಾಲೂಕು ಕಾರ್ಯಾಧ್ಯಕ್ಷ ವೆಂಕಟೇಶ್ ಶಂಕ್ರಿ ದೇವತಗಲ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.ಮರದ ನೆರಳಿನಲ್ಲಿ ಮಕ್ಕಳ ಕಲಿಕೆ:ಮಾಧ್ಯಮ ಮಿತ್ರರು ಹಾಗೂ ಸಂಘಟನೆಯ ಮುಖಂಡರು ಅಂಗನವಾಡಿ ಕೇಂದ್ರದ ಸ್ಥಳಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಮಕ್ಕಳು ಮರದ ನೆರಳಿನಲ್ಲಿ ಕುಳಿತು ಕಲಿಯುತ್ತಿರುವ ದೃಶ್ಯ ಕಂಡುಬಂದಿದೆ. ಪುಟ್ಟ ಮಕ್ಕಳಿಗೆ ಸುರಕ್ಷಿತ ವಾತಾವರಣ, ಕುಡಿಯುವ ನೀರು ಹಾಗೂ ಶೌಚಾಲಯದಂತಹ ಕನಿಷ್ಠ ಸೌಲಭ್ಯಗಳೂ ಇಲ್ಲದಿರುವುದು ಆತಂಕಕಾರಿ ಸಂಗತಿಯಾಗಿದೆ. ಮಕ್ಕಳಿಗೆ ಉತ್ತಮ ಕಲಿಕಾ ವಾತಾವರಣ ಕಲ್ಪಿಸಬೇಕಾದ ಅಂಗನವಾಡಿ ಕೇಂದ್ರವೇ ಮೂಲಸೌಕರ್ಯಗಳಿಲ್ಲದೆ ನಡೆಯುತ್ತಿರುವುದು ಆಡಳಿತ ವ್ಯವಸ್ಥೆಯ ಕಾರ್ಯವೈಖರಿಯ ಬಗ್ಗೆ ಪ್ರಶ್ನೆ ಮೂಡಿಸಿದೆ. ಅಧಿಕಾರಿಗಳ ವಿರುದ್ಧ ತನಿಖೆಗೆ ಆಗ್ರಹ:ಕೂಡಲೇ ಸಂಬಂಧಪಟ್ಟ ಜಿಲ್ಲಾ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಗ್ರಾಮಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಬೇಕು. ಮಕ್ಕಳ ಸುರಕ್ಷತೆ ಹಾಗೂ ಕಲಿಕೆಗೆ ಅಗತ್ಯವಾದ ಕಟ್ಟಡ ಮತ್ತು ಮೂಲಸೌಕರ್ಯಗಳನ್ನು ತಕ್ಷಣ ಒದಗಿಸಬೇಕು. ಈ ಅವ್ಯವಸ್ಥೆಗೆ ಸಂಬಂಧಿಸಿದಂತೆ ಅಂಗನವಾಡಿ ಕಾರ್ಯಕರ್ತೆ, ಮೇಲ್ವಿಚಾರಕಿ ನೀಲಮ್ಮ ಹಾಗೂ ಸಿರವಾರ ತಾಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿ ವಿರೂಪಾಕ್ಷಯ್ಯ ಸ್ವಾಮಿ ಅವರ ಕರ್ತವ್ಯ ನಿರ್ವಹಣೆಯ ಬಗ್ಗೆ ಸೂಕ್ತ ತನಿಖೆ ನಡೆಸಬೇಕು. ಕರ್ತವ್ಯ ಲೋಪ ಸಾಬೀತಾದಲ್ಲಿ ನಿಯಮಾನುಸಾರ ಕ್ರಮ ಕೈಗೊಳ್ಳಬೇಕು ಎಂದು ವೆಂಕಟೇಶ್ ಶಂಕ್ರಿ ದೇವತಗಲ್ ಆಗ್ರಹಿಸಿದ್ದಾರೆ.ಇನ್ನಾದರೂ ಸಂಬಂಧಪಟ್ಟ ಅಧಿಕಾರಿಗಳು, ಸ್ಥಳೀಯ ಗ್ರಾಮ ಪಂಚಾಯಿತಿ ಆಡಳಿತಾಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಎಚ್ಚೆತ್ತುಕೊಂಡು ಮಕ್ಕಳ ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ತಕ್ಷಣ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಸಿಂಧನೂರಿನಲ್ಲಿ ಭೀಕರ ರಸ್ತೆ ಅಪಘಾತ: ಕಾರು ಪಲ್ಟಿಯಾಗಿ ದಂಪತಿ ದುರ್ಮರಣ, ಸ್ನೇಹಿತನಿಗೆ ಗಾಯ!

❑ ನೈಜ್ಯ ದೆಸೆ ನ್ಯೂಸ್



ಸಿಂಧನೂರು, ನವೆಂಬರ್ 8:** ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಸಿಂಧನೂರುಬಳ್ಳಾರಿ ಮುಖ್ಯ ರಸ್ತೆಯ ಹೊಸಳ್ಳಿ ಕ್ಯಾಂಪ್ ಸಮೀಪ ಭಾನುವಾರ ಬೆಳಗ್ಗೆ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಯುವ ದಂಪತಿ ಮೃತಪಟ್ಟಿದ್ದು, ಮತ್ತೊಬ್ಬ ವ್ಯಕ್ತಿ ಗಾಯಗೊಂಡಿರುವ ದುರ್ಘಟನೆ ನಡೆದಿದೆ.ಮೃತರನ್ನು ಸಿಂಧನೂರು ನಗರದ ಇಂದಿರಾನಗರ ನಿವಾಸಿಗಳಾದ **ರಾಘವೇಂದ್ರ (30) ಹಾಗೂ ಅವರ ಪತ್ನಿ ಹೇಮಲತಾ (27)** ಎಂದು ಗುರುತಿಸಲಾಗಿದೆ. ಮೂಲತಃ ಬಳ್ಳಾರಿ ಜಿಲ್ಲೆಯವರಾದ ದಂಪತಿ ಸಿಂಧನೂ–ರಿನ ಇಂದಿರಾನಗರದಲ್ಲಿ ವಾಸವಾಗಿದ್ದರು ಎಂದು ತಿಳಿದುಬಂದಿದೆ.ಭಾನುವಾರ ಬೆಳಗ್ಗೆ ಸಿಂಧನೂರುಬಳ್ಳಾರಿ ಮುಖ್ಯ ರಸ್ತೆಯಲ್ಲಿ ಸಂಚರಿಸುತ್ತಿದ್ದ ಕಾರು ಹೊಸಳ್ಳಿ ಕ್ಯಾಂಪ್ ಸಮೀಪ ಪಲ್ಟಿಯಾದ ಪರಿಣಾಮ ಈ ದುರ್ಘಟನೆ ಸಂಭವಿಸಿದೆ. ಅಪಘಾತದ ತೀವ್ರತೆಗೆ ದಂಪತಿ ಮೃತಪಟ್ಟಿದ್ದಾರೆ. ಇದೇ ಕಾರಿನ ಹಿಂಬದಿಯ ಆಸನದಲ್ಲಿ ಕುಳಿತಿದ್ದ ರಾಘವೇಂದ್ರ ಅವರ ಸ್ನೇಹಿತ **ರವಿಕುಮಾರ್** ಗಾಯಗೊಂಡಿದ್ದು, ಅವರನ್ನು ಸಿಂಧನೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ.ಯುವ ದಂಪತಿಯ ಅಕಾಲಿಕ ಸಾವು ಕುಟುಂಬದಲ್ಲಿ ಶೋಕಕೇವಲ 30 ಮತ್ತು 27 ವರ್ಷ ವಯಸ್ಸಿನ ಯುವ ದಂಪತಿ ರಸ್ತೆ ಅಪಘಾತದಲ್ಲಿ ಮೃತಪಟ್ಟಿರುವುದು ಅತ್ಯಂತ ದುಃಖಕರ ಸಂಗತಿಯಾಗಿದೆ. ಇಬ್ಬರ ಅಕಾಲಿಕ ನಿಧನದಿಂದ ಕುಟುಂಬಸ್ಥರು ಹಾಗೂ ಆತ್ಮೀಯರಲ್ಲಿ ಶೋಕ ಮಡುಗಟ್ಟಿದೆ.ರಸ್ತೆ ಸುರಕ್ಷತೆಯ ಬಗ್ಗೆ ಮತ್ತೊಮ್ಮೆ ಎಚ್ಚರಿಕೆಈ ಅಪಘಾತವು ರಸ್ತೆ ಸಂಚಾರದ ವೇಳೆ ಸುರಕ್ಷತಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಅಗತ್ಯವನ್ನು ಮತ್ತೊಮ್ಮೆ ನೆನಪಿಸಿದೆ. ವಾಹನ ಚಾಲಕರು ವೇಗದ ಮಿತಿಯನ್ನು ಪಾಲಿಸುವುದು, ಸೀಟ್ ಬೆಲ್ಟ್ ಧರಿಸುವುದು ಹಾಗೂ ಚಾಲನೆಯ ವೇಳೆ ಸಂಪೂರ್ಣ ಎಚ್ಚರಿಕೆ ವಹಿಸುವುದು ಅತ್ಯಂತ ಅಗತ್ಯವಾಗಿದೆ.ಅಪಘಾತಕ್ಕೆ ನಿಖರ ಕಾರಣವೇನು ಎಂಬುದು ಇನ್ನಷ್ಟೇ ತಿಳಿದುಬರಬೇಕಿದೆ. ಘಟನೆ ಕುರಿತು ಹೆಚ್ಚಿನ ಅಧಿಕೃತ ಮಾಹಿತಿ ನಿರೀಕ್ಷಿಸಲಾಗಿದೆ.ಒಂದು ಕ್ಷಣದ ರಸ್ತೆ ಅಪಘಾತ ಎರಡು ಅಮೂಲ್ಯ ಜೀವಗಳನ್ನು ಬಲಿ ಪಡೆದಿರುವುದು ನಿಜಕ್ಕೂ ಹೃದಯವಿದ್ರಾವಕ. ಮೃತ ದಂಪತಿಯ ಆತ್ಮಕ್ಕೆ ಶಾಂತಿ ಸಿಗಲಿ. ಗಾಯಾಳು ರವಿಕುಮಾರ್ ಶೀಘ್ರ ಗುಣಮುಖರಾಗಲಿ.**

ರಾಷ್ಟ್ರೀಯ ಸೇವಾ ಯೋಜನೆಯಿಂದ ವಿದ್ಯಾರ್ಥಿಗಳಲ್ಲಿ ನಾಯಕತ್ವ ಗುಣಗಳ ಬೆಳವಣಿಗೆ: ಸಿದ್ಧನಗೌಡ

❑ ನೈಜ್ಯ ದೆಸೆ ನ್ಯೂಸ್



ಸಿಂಧನೂರು: ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್) ವಿದ್ಯಾರ್ಥಿಗಳಲ್ಲಿ ನಾಯಕತ್ವದ ಗುಣಗಳು, ಶಿಸ್ತು, ಸೇವಾ ಮನೋಭಾವ ಹಾಗೂ ಸಾಮಾಜಿ–ಕ ಜವಾಬ್ದಾರಿಯನ್ನು ಬೆಳೆಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ ಎಂದು ಎನ್‌ಎಸ್–ಎಸ್ ರಾಯಚೂರು ಜಿಲ್ಲಾ ನೋಡಲ್ ಅಧಿಕಾರಿ ಸಿದ್ಧನಗೌಡ ಹೇಳಿದರು. ತಾಲೂಕಿನ ಅಲಬನೂರು ಗ್ರಾಮದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ವತಿಯಿಂದ ಆಯೋಜಿಸಲಾಗಿದ್ದ 2026–27ನೇ ಸಾಲಿನ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.ವಿದ್ಯಾರ್ಥಿಗಳು ಕೇವಲ ಶೈಕ್ಷಣಿಕ ಸಾಧನೆಗೆ ಸೀಮಿತವಾಗದೆ ಸಮಾಜದ ಸಮಸ್ಯೆಗಳನ್ನು ಅರಿತುಕೊಂಡು, ಸಾಮಾಜಿ–ಕ ಸೇವಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಎನ್‌ಎಸ್‌ಎಸ್ ಶಿಬಿರಗಳು ವಿದ್ಯಾರ್ಥಿಗಳಲ್ಲಿ ಸೇವಾ ಮನೋಭಾವ, ಪರಸ್ಪರ ಸಹಕಾರ, ಆತ್ಮವಿಶ್ವಾಸ ಹಾಗೂ ನಾಯಕತ್ವದ ಸಾಮರ್ಥ್ಯವನ್ನು ವೃದ್ಧಿಸಲು ಉತ್ತಮ ವೇದಿಕೆಯಾಗಿವೆ ಎಂದು ತಿಳಿಸಿದರು. ಕಾರ್ಯಕ್ರಮದ ಧ್ವಜಾರೋಹಣವನ್ನು ಅಲಬನೂರು ಸರ್ಕಾರಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ಅಯ್ಯಪ್ಪ ಮೇಟಿ ಹಾಗೂ 'ಸುದ್ದಿಮೂಲ' ಪತ್ರಿಕೆಯ ವರದಿಗಾರ ಅಮರೇಶ ಅಲಬನೂರು ಅವರು ಜಂ–ಟಿಯಾಗಿ ನೆರವೇರಿಸಿದರು.ಎನ್‌ಎಸ್–ಎಸ್ ಶಿಬಿರಾಧಿಕಾರಿ ರವಿ ಬಿ. ಸಾಸಲಮರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿವರಾಜ ಅಡಗಲ್ ಅವರು ಶಿಬಿರಾರ್ಥಿಗಳಿಗೆ ರಾಷ್ಟ್ರೀಯ ಸೇವಾ ಯೋಜನೆಯ ಪ್ರತಿಜ್ಞಾವಿಧಿ ಬೋಧಿಸಿದರು.ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಚಾರ್ಯ ಡಾ. ಎಸ್. ಶಿವರಾಜ ವಹಿಸಿದ್ದರು. ಉಪನ್ಯಾಸಕರಾದ ಮಹಿಬೂಬ್ ಕೆ., ಪಂಪಾಪತಿ ಕಲ್ಮಂಗಿ, ಮೌನೇಶ ಬಳಗನೂರು ಹಾಗೂ ಶಂಕರಗೌಡ ಬೂತಲದಿನ್ನಿ ಉಪಸ್ಥಿತ–ರಿದ್ದರು.ಪ್ರೊ. ಎಂ.ಡಿ. ನಂಜುಂಡಸ್ವಾಮಿ ತಂಡದ ನಾಯಕಿ ಮಮತಾ ಹೆಚ್. ಬೆಳಗುರ್ಕಿ ಕಾರ್ಯಕ್ರಮ ನಿರೂಪಿಸಿದರು. ಮಂಜುಳಾ ಬಾದರ್ಲಿ ಹಾಗೂ ಉಷಾ ವಳಬಳ್ಳಾರಿ ಪ್ರಾರ್ಥಿಸಿದರು. ವಸಂತ ಹರೇಟನೂರು ಮತ್ತು ಅಮೃತ ಮಾಡಶಿರವಾರ ಸ್ವಾಗತಿಸಿದರು. ಸವಿತಾ ಬೆಳಗುರ್ಕಿ ವಂದಿಸಿದರು.

ವಚನ ದರ್ಶನ

ಎನ್ನ ಕಾಯವ ದಂಡಿಗೆಯ ಮಾಡಯ್ಯಾ ಎನ್ನ ಶಿರವ ಸೋರೆಯ ಮಾಡಯ್ಯಾ ಎನ್ನ ನರವ ತಂತಿಯ ಮಾಡಯ್ಯಾ, ಎನ್ನ ಬೆರಳ ಕಡ್ಡಿಯ ಮಾಡಯ್ಯಾ ಬತ್ತೀಸ ರಾಗವ ಹಾಡಯ್ಯಾ, ಉರದಲೊತ್ತಿ ಬಾರಿಸು,ಕೂಡಲಸಂಗಮದೇವಾ

12 ನೇ ಶತಮಾನದ ಶರಣರಾದ ವಿಶ್ವಗುರು ಬಸವಣ್ಣನವರ ಅತ್ಯಂತ ಪ್ರಸಿದ್ಧವಾದ ಹಾಗೂ ಸುಂದರವಾದ ವಚನವಾಗಿದೆ. ಈ ವಚನದಲ್ಲಿ ವಿಶ್ವಗುರು ಬಸವಣ್ಣನವರು ತಮ್ಮ ಸಂಪೂರ್ಣ ದೇಹವನ್ನು ದೇವರ ಸೇವೆಗೆ ಅರ್ಪಿಸಿಕೊಳ್ಳುವಂತೆ ಮತ್ತು ದೇವನೇ ಅದನ್ನು ನುಡಿಸುವಂತೆ ಬೇಡಿಕೊಂಡಿದ್ದಾರೆ.ಈ ವಚನದಲ್ಲಿ ಬಸವಣ್ಣನವರು ತಮ್ಮನ್ನು ತಾವು ದೇವರ ಕೈಯಲ್ಲಿರುವ 'ದಂಡಿಗೆ' ಇಂದಿನ ವೀಣೆಯಂತಹ ಒಂದು ತಂತಿ ವಾದ್ಯ ಮಾಡಲು ಕೇಳಿಕೊಳ್ಳುತ್ತಿದ್ದಾರೆ.ದೇಹ ಮತ್ತು ಶಿರ ನನ್ನ ದೇಹವನ್ನು ವಾದ್ಯದ ದಂಡವನ್ನಾಗಿಯೂ, ನನ್ನ ತಲೆಯನ್ನು ವಾದ್ಯಕ್ಕೆ ಬಳಸುವ ಒಣ–ಗಿದ ಸೋರೆಕಾಯಿಯ ಬುರುಡೆಯನ್ನಾಗಿಯೂ ಮಾಡು.ನರ ಮತ್ತು ಬೆರಳು: ನನ್ನ ದೇಹದ ನರಗಳನ್ನು ಆ ವಾದ್ಯದ ತಂತಿಗಳನ್ನಾಗಿ ಮಾಡು ಮತ್ತು ನನ್ನ ಬೆರಳುಗಳನ್ನೇ ಅದನ್ನು ನುಡಿಸುವ ಕಡ್ಡಿಯನ್ನಾಗಿ ಪರಿವರ್ತಿಸು.ಸಂಗೀತದ ನಾದ: ಹೇ ಕೂಡಲಸಂಗಮದೇವ, ನನ್ನನ್ನು ನಿನ್ನ ಎದೆಗೆ ಒತ್ತಿ ಹಿಡಿದು, ನಿನಗೆ ಇಷ್ಟ ಬಂದಂತೆ ಮೂವತ್ತೆರಡು ಬತ್ತೀಸ ರಾಗಗಳನ್ನು ಮಂಜುಳವಾಗಿ ನುಡಿಸು. ನನ್ನ ಜೀವನದ ಪ್ರತಿ ಕ್ಷಣವೂ ನಿನ್ನ ನಾದಮಯವಾಗಿರಲಿ ಎಂಬುದು ಇದರ ಆಶಯವಾಗಿದೆ.ಅಂದರೆ, "ನನ್ನಲ್ಲಿ ಯಾವುದೇ ಅಹಂಕಾರ ಉಳಿಯಬಾರದು, ನಾನು ಸಂಪೂರ್ಣವಾಗಿ ನಿನ್ನ ಇಚ್ಛೆಯಂತೆ ನಡೆಯುವ ನಿಮಿತ್ತ ಮಾತ್ರನಾಗಬೇಕು" ಎಂಬ ಪರಮ ಭಕ್ತಿಯ ಶರಣಾಗತಿಯ ಭಾವ ಇಲ್ಲಿದೆ. ಇಂಥಹ ವಚನಗಳು ಮನುಕುಲಕ್ಕೆ ದಾರಿದೀಪವಾಗಿವೆ. ನಾವು ನೀವು ವಚನದ ದಾರಿಯಲ್ಲಿ ಸಾಗೋಣ ಶರಣು ಶರಣಾರ್ಥಿಗಳು.

ಪಂಪಯ್ಯಸ್ವಾಮಿ ಸಾಲಿಮಠ
ಅಂತರಗಂಗಿ–ಸಿಂಧನೂರು. 998094144

ಜಿಲ್ಲಾ, ತಾಲೂಕು ಪಂಚಾಯಿತಿ ಚುನಾವಣೆ: RO, ARO ನೇಮಕಕ್ಕೆ ನ.16ರ ಗಡುವು ಚುನಾವಣಾ ಆಯೋಗದಿಂದ ಜಿಲ್ಲಾಧಿಕಾರಿಗಳಿಗೆ ಸೂಚನೆ

ನೈಜ್ಯ ದೆಸೆ ನ್ಯೂಸ್



ಬೆಂಗಳೂರು: ರಾಜ್ಯದಲ್ಲಿ ಸುಮಾರು ಐದು ವರ್ಷಗಳಿಂದ ಚುನಾಯಿತ ಪ್ರತಿನಿಧಿಗಳಿಲ್ಲದೆ ಆಡಳಿತಾಧಿಕಾರಿಗಳ ಮೂಲಕ ನಡೆಯುತ್ತಿರುವ ಜಿಲ್ಲಾ ಪಂಚಾಯಿತಿ ಹಾಗೂ ತಾಲೂಕು ಪಂಚಾಯಿತಿ ಸಂಸ್ಥೆಗಳಿಗೆ ಚುನಾವಣೆ ನಡೆಸುವ ಪ್ರಕ್ರಿಯೆ ಇದೀಗ ಮತ್ತಷ್ಟು ವೇಗ ಪಡೆದುಕೊಂಡಿದೆ.ಕರ್ನಾಟಕ ರಾಜ್ಯ ಚುನಾವಣಾ ಆಯೋಗವು ಮುಂಬರುವ ಜಿಲ್ಲಾ ಪಂಚಾಯಿತಿ ಮತ್ತು ತಾಲೂಕು ಪಂಚಾಯಿತಿ ಸಾರ್ವತ್ರಿಕ ಚುನಾವಣೆಗಳ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಮಹತ್ವದ ನಿರ್ದೇಶನ ನೀಡಿದೆ. ಖಜಿ, ಂಖಜಿ ನೇಮಕಕ್ಕೆ ಕಟ್ಟುನಿಟ್ಟಿನ ಸೂಚನೆ ಕರ್ನಾಟಕ ಪಂಚಾಯತ್ ರಾಜ್ ಚುನಾವಣಾ ನಿಯಮಗಳು 1993ರ ನಿಯಮ 6ರ ಅನ್ವಯ ಚುನಾವಣಾಧಿಕಾರಿಗಳು (ಖಜಿ) ಹಾಗೂ ಸಹಾಯಕ ಚುನಾವಣಾಧಿಕಾರಿಗಳನ್ನು (ಂಖಜಿ) ನೇಮಕ ಮಾಡಲು ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ.ಆಯೋಗದ ನಿರ್ದೇಶನದ ಪ್ರಮುಖ ಅಂಶಗಳು: ಜಿಲ್ಲಾ ಪಂಚಾಯಿತಿ ಚುನಾವಣೆ: ಪ್ರತಿ ತಾಲೂಕಿಗೆ ಉಪವಿಭಾಗಾಧಿಕಾರಿ ಅಥವಾ ತತ್ಸಮಾನ ಹುದ್ದೆಯ ಅಧಿಕಾರಿಯನ್ನು ಖಜಿ ಆಗಿ ನೇಮಿಸುವುದು.ಹೆಚ್ಚುವರಿ ಕ್ಷೇತ್ರಗಳು: ಒಂದು ತಾಲೂಕಿನಲ್ಲಿ 10ಕ್ಕಿಂತ ಹೆಚ್ಚು ಜಿಲ್ಲಾ ಪಂಚಾಯಿತಿ ಕ್ಷೇತ್ರಗಳಿದ್ದರೆ ಇಬ್ಬರು ಖಜಿ ನೇಮಕಕ್ಕೆ ಅವಕಾಶ.ತಾಲೂಕು ಪಂಚಾಯಿತಿ ಚುನಾವಣೆ: ಸರಾಸರಿ 15 ಕ್ಷೇತ್ರಗಳಿಗೆ ಒಬ್ಬ ತಹಸೀಲ್ದಾರ್ ಅಥವಾ ತತ್ಸಮಾನ ಅಧಿಕಾರಿಯನ್ನು ಖಜಿ ಆಗಿ ನೇಮಿಸುವುದು.ಂಖಜಿ ನೇಮಕ: ಖಜಿಗಳಿಗೆ ಸಹಕಾರ ನೀಡಲು ಸೂಕ್ತ ಅಧಿಕಾರಿಗಳನ್ನು ಸಹಾಯಕ ಚುನಾವಣಾಧಿಕಾರಿಗಳಾಗಿನೇಮಿಸುವುದು. ಅನುಭವಕ್ಕೆ ಆದ್ಯತೆ: ಚುನಾವಣಾ ಕರ್ತವ್ಯ ನಿರ್ವಹಿಸಿದ ಅನುಭವ ಹೊಂದಿರುವ ಅಧಿಕಾರಿಗಳಿಗೆ ಆದ್ಯತೆ ನೀಡುವುದು. ನವೆಂಬರ್ 16ರೊಳಗೆ ಪ್ರಸ್ತಾವನೆ ಸಲ್ಲಿಕೆ ಎಲ್ಲ ಜಿಲ್ಲಾಧಿಕಾರಿಗಳು ಖಜಿ ಮತ್ತು ಂಖಜಿ ನೇಮಕಾತಿಗೆ ಸಂಬಂಧಿಸಿದ ಪ್ರಸ್ತಾವನೆಗಳನ್ನು ನವೆಂಬರ್ 16, 2026ರೊಳಗೆ ರಾಜ್ಯ ಚುನಾವಣಾ ಆಯೋಗಕ್ಕೆ ಸಲ್ಲಿಸಬೇಕುನೇಮಕಾತಿ ಆದೇಶಗಳನ್ನು ಅಧಿಕಾರಿಗಳ ವೈಯಕ್ತಿಕ ಹೆಸರಿನ ಬದಲಾಗಿ ಅವರ ಹುದ್ದೆಯ ಆಧಾರದ ಮೇಲೆ ಹೊರಡಿಸಬೇಕು. ಆಯೋಗದ ಅನುಮೋದನೆಯ ನಂತರ ಅನುಮತಿ ಇಲ್ಲದೆ ನೇಮಕಗೊಂಡ ಅಧಿಕಾರಿಗಳನ್ನು ಬದಲಾಯಿಸುವಂತಿಲ್ಲ ಎಂಬ ಸೂಚನೆಯೂ ಇದೆ.10 ವರ್ಷಗಳ ಬಳಿಕ ಚುನಾವಣೆ ನಿರೀಕ್ಷೆರಾಜ್ಯದಲ್ಲಿ ಜಿಲ್ಲಾ ಪಂಚಾಯಿತಿ ಮತ್ತು ತಾಲೂಕು ಪಂಚಾಯಿತಿ ಚುನಾವಣೆಗಳು ಕೊನೆಯದಾಗಿ 2016ರಲ್ಲಿ ನಡೆದಿದ್ದವು. ಇದೀಗ 2026ರಲ್ಲಿ ಮತ್ತೆ ಚುನಾವಣೆ ನಡೆಸಲು ಸಿದ್ಧತೆಗಳು ನಡೆಯುತ್ತಿವೆ. ರಾಜ್ಯದಲ್ಲಿ:31 ಜಿಲ್ಲಾ ಪಂಚಾಯಿತಿಗಳು239 ತಾಲೂಕು ಪಂಚಾಯಿತಿಗಳು1,129 ಜಿಲ್ಲಾ ಪಂಚಾಯಿತಿ ಕ್ಷೇತ್ರಗಳು3,656 ತಾಲೂಕು ಪಂಚಾಯಿತಿ ಕ್ಷೇತ್ರಗಳುಒಟ್ಟು 4,785 ಕ್ಷೇತ್ರಗಳಿಗೆ ಚುನಾಯಿತ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ಪ್ರಕ್ರಿಯೆ ನಡೆಯಬೇಕಿದೆ.ಜನವರಿ 2027ರಲ್ಲಿ ಚುನಾವಣೆ ಸಾಧ್ಯತೆ?ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ. ಖಂಡ್ರೆ ಅವರು ಜನವರಿ 2027ರ ಮೊದಲ ಅಥವಾ ಎರಡನೇ ವಾರದಲ್ಲಿ ಚುನಾವಣೆ ನಡೆಯುವ ಸಾಧ್ಯತೆಯಿದೆ ಎಂದು ಅಕ್ಟೋಬರ್ 31ರಂದು ಹೇಳಿದ್ದರು. ಆದರೆ ಅಂತಿಮ ದಿನಾಂಕವನ್ನು ರಾಜ್ಯ ಚುನಾವಣಾ ಆಯೋಗವೇ ಅಧಿಕೃತವಾಗಿ ಪ್ರಕಟಿಸಬೇಕಿದೆ. ರಾಜಕೀಯ ಪಕ್ಷಗಳಲ್ಲಿ ಚಟುವಟಿಕೆ ಆರಂಭಚುನಾವಣಾ ಸಿದ್ಧತೆಗಳು ವೇಗ ಪಡೆದುಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಗ್ರಾಮೀಣ ಭಾಗದಲ್ಲಿ ರಾಜಕೀಯ ಚಟುವಟಿಕೆಗಳು ಹೆಚ್ಚಾಗುವ ನಿರೀಕ್ಷೆಯಿದೆ. ಜಿಲ್ಲಾ ಪಂಚಾಯಿತಿ ಹಾಗೂ ತಾಲೂಕು ಪಂಚಾಯಿತಿ ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಆಸಕ್ತಿ ಹೊಂದಿರುವ ಆಕಾಂಕ್ಷಿಗಳು ಈಗಿನಿಂದಲೇ ತಮ್ಮ ಕ್ಷೇತ್ರಗಳಲ್ಲಿ ಜನಸಂಪರ್ಕ ಹಾಗೂ ಸಂಘಟನಾ ಚಟುವಟಿಕೆಗಳನ್ನು ಚುರುಕುಗೊಳಿಸುವ ಸಾಧ್ಯತೆಯಿದೆ.ಒಟ್ಟಿನಲ್ಲಿ, ಖಜಿ ಮತ್ತು ಂಖಜಿ ನೇಮಕಾತಿಗೆ ಸಂಬಂಧಿಸಿದಂತೆ ಚುನಾವಣಾ ಆಯೋಗ ಹೊರಡಿಸಿರುವ ಆದೇಶವು ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆ ಪ್ರಕ್ರಿಯೆಯಲ್ಲಿ ಮಹತ್ವದ ಬೆಳವಣಿಗೆಯಾಗಿದೆ.

ತಿಡಿಗೋಳದಲ್ಲಿ ಸವರ್ಣೀಯರಿಂದ ದಲಿತರಿಗೆ ಬಹಿಷ್ಕಾರ ಹಾಕಿದ್ದು ಖಂಡನೆ: ಎನ್.ಮೂರ್ತಿ

ನೈಜ್ಯ ದೆಸೆ ನ್ಯೂಸ್



ಸಿಂಧನೂರು ಸ್ವತಂತ್ರ ಬಂದು 79 ವರ್ಷ ಕಳೆದರೂ ಅಸ್ಪೃಶ್ಯತೆ, ಅಸಮಾನತೆ, ಇನ್ನೂ ಜೀವಂತವಾಗಿದೆ. ಅ.18ರಂದು ತಿಡಿಗೋಳ ಗ್ರಾಮದಲ್ಲಿ ಪರಿಶಿಷ್ಟ ಜಾತಿಯ ಯುವಕರು ಗ್ರಾಮದ ಮೇಲ್ಜಾತಿಯವರೊಂದಿಗೆ ಶ್ರೀ ಆಂಜನೇಯ ಜಾತ್ರೆ ಮೆರವಣಿಗೆಯಲ್ಲಿ ಸರಿಸಮವಾಗಿ ಭಾಗವಹಿಸಿದ ಕಾರಣಕ್ಕೆ 400ಕ್ಕೂ ಹೆಚ್ಚು ಮೇಲ್ಜಾತಿಯ ಯುವಕರು 100ಕ್ಕೂ ಹೆಚ್ಚು ದಲಿತರ ಮೇಲೆ ಮಾರಕಾಸ್ತ್ರಗಳಿಂದ ಅಮಾನುಷ ದಾಳಿ ನಡೆಸಿದ್ದನ್ನು ಕರ್ನಾಟಕ ದಲಿತ ಸಂಘರ್ಷ ಸಮಿತಿ ರಾಜ್ಯಾಧ್ಯಕ್ಷ ಎನ್.ಮೂರ್ತಿ ಖಂಡಿಸಿದರು. ನಗರದ ಪತ್ರಿಕಾ ಭವನದಲ್ಲಿ ಭಾನುವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಮಚ್ಚು, ದೊಣ್ಣೆ, ಬಡಿಗಿ, ಕಬ್ಬಿಣದ ರಾಡುಗಳಿಂದ ನೂರಾರು ಮಹಿಳೆಯರು, ವೃದ್ದರು, ಮತ್ತು ಮಕ್ಕಳನ್ನು ಬಿಡದೆ ಬೆನ್ನಟ್ಟಿ ಓಡಾಡಿಸಿ ಹೆಣ್ಣುಮಕ್ಕಳ ಸೀರೆ, ರವಿಕೆ, ಹರಿದು ಅಪಮಾನಿಸಿದ್ದು, ಪ್ರಾಣಿಗಳ ರೀತಿಯಲ್ಲಿ ಹೊಡೆದು ಹೇಯ ಕೃತ್ಯ ಎಸಗಿ ಕ್ರೂರ ಹಲ್ಲೆ ನಡೆಸಿ, ಸಿಳ್ಳೆ, ಕೇಕೆ, ಹಾಕಿ ಅಟ್ಟಹಾಸವನ್ನು ತೋರಿದ್ದಾರೆ. ಸವರ್ಣೀಯರಿಂದ ಹಲ್ಲೆಗೊಳಗಾದ 100ಕ್ಕೂ ಹೆಚ್ಚು ದಲಿತರ ತಲೆಗೆ ಏಟು ಬಿದ್ದಿದ್ದು, ಕೈಕಾಲು ಮುರಿದಿದ್ದು, ರಕ್ತ ಸುರಿದು ಹರಿದ ಬಟ್ಟೆಗಳಲ್ಲಿ ರಕ್ಷಣೆ ಕೋರಿ ಪೊಲೀಸ್ ಠಾಣೆಗೆ ಧಾವಿಸಿದ್ದರು ಸೂಕ್ತ ರಕ್ಷಣೆ ದೊರೆತಿಲ್ಲ. ತುರ್ವಿಹಾಳ ಪೊಲೀಸ್ ಠಾಣೆಯಲ್ಲಿ 71 ದಲಿತರ ಮೇಲೆ ಕೌಂಟರ್ ಕೇಸ್ ದಾಖಲಿಸಿ ಅನ್ಯಾಯ ಮಾಡಿದ್ದಾರೆ. ಸಿಂಧನೂರು ಮತ್ತು ಮಸ್ಕಿ ಕ್ಷೇತ್ರದ ಶಾಸಕರು ಬಲಾಢ್ಯ ಸವರ್ಣೀಯರ ಪರವಾಗಿದ್ದಾರೆ. ಹಲವಾರು ದಲಿತ ಕುಟುಂಬಗಳಿಗೂ ಸವರ್ಣೀಯರ ಭೂಮಾಲೀಕರ ದೌರ್ಜನ್ಯದಿಂದ ಬೇಸತ್ತು ಹುಟ್ಟಿದ ಊರನ್ನೇ ತೊರೆದು ಗುಳೆ ಹೋಗಿದ್ದಾರೆ. ತಿಡಿಗೋಳದಲ್ಲಿ ಭೀಕರ ಅಶಾಂತಿ ಪರಿಸ್ಥಿತಿಯಿದೆ. ದಲಿತರು ಭಯ ಭೀತಿಯಿಂದ ತತ್ತರಿಸಿದ್ದಾರೆ. ಆದರೂ ಪೊಲೀಸರು ಯಾವೊಬ್ಬ ಆರೋಪಿಯನ್ನು ಕೂಡ ಬಂಧಿಸಿಲ್ಲ ಎಂದು ದೂರಿದರು.ದಲಿತರಿಗೆ ಸಾಮಾಜಿಕ ಬಹಿಷ್ಕಾರ ಹಾಕಿ ಅಂಗಡಿಗಳಲ್ಲಿ ಆಹಾರಧಾನ್ಯ ಕೊಡುವಂತಿಲ್ಲ. ಕ್ಷೌರ ಮಾಡುವಂತಿಲ್ಲ. ಕುಡಿಯುವ ನೀರು ಕೊಡುತ್ತಿಲ್ಲ, ದಲಿತರ ಜೊತೆಗೆ ಮಾತನಾಡಿದ ಸವರ್ಣೀಯರಿಗೆ 5001 ದಂಡ ಎಂದು ಷರತ್ತು ವಿಧಿಸಲಾಗಿದೆ. ಸರ್ಕಾರ ಮಂಜೂರು ಮಾಡಿದ ಭೂಮಿಯನ್ನು ಕಿತ್ತುಕೊಂಡಿದ್ದಾರೆ. 2022ರಲ್ಲಿಯೂ ಕೂಡ ಜಾತ್ರೆ ಸಂದರ್ಭದಲ್ಲಿ ದೌರ್ಜನ್ಯ ನಡೆದಿತ್ತು.2015 ರಲ್ಲಿ 17 ದಲಿತರ ಗುಡಿಸಲು ಸುಟ್ಟವರಿಗೆ ಶಿಕ್ಷೆಯಾಗಿಲ್ಲ. ರಾಜ್ಯದಲ್ಲಿ 15ಕ್ಕೂ ಹೆಚ್ಚು ಕೊಲೆ, ಅತ್ಯಾಚಾರ, ಹಲ್ಲೆ, ಬಹಿಷ್ಕಾರದಂತಹ ಗಂಭೀರ ಪ್ರಕರಣಗಳು ನಡೆದಿವೆ. ಇದುವರೆಗೂ ಶಾಸಕರು, ಗೃಹಸಚಿವರು, ಸಮಾಜಕಲ್ಯಾಣ ಸಚಿವರು ಆದಿಯಾಗಿ ಮುಖ್ಯಮಂತ್ರಿ ಸಂತ್ರಸ್ತ ದಲಿತರಿಗೆ ನ್ಯಾಯ ನೀಡಲು ಪ್ರಯತ್ನಿಸಿಲ್ಲ. ಹದ್ದಿನಾಳದ ಭೂಮಾನಂದನ ಕಗ್ಗೋಲೆ, ಸಿರವಾರ ಹೊಕ್ರಾಣಿ ಗ್ರಾಮದ ಅಶ್ವಿನಿ ಮತ್ತು ಕರಡಕಲ್ ಗ್ರಾಮದ ರೇಣಮ್ಮನ ಮೇಲೆ ಅತ್ಯಾಚಾರ ಕೊಲೆ, ಮಾನ್ವಿ ರಮೇಶ ನಕ್ಕುಂದಿ ಯುವಕನ ಕೊಲೆ, ಈಚನಾಳ ಗ್ರಾಮದಲ್ಲಿ ದಲಿತರ ಮೇಲೆ ನಡೆದ ದೌರ್ಜನ್ಯ, ಕಲ್ಬುರ್ಗಿ ಸೇಡಂನ ಉಡಗಿಯಲ್ಲಿ ದಲಿತ ಯುವಕನ ಕೊಲೆ, ಹೀಗೆ ಇಡೀ ರಾಜ್ಯದಾದ್ಯಂತ ದಲಿತರ ಮೇಲೆ ನಡೆದ ದಬ್ಬಾಳಿಕೆ ನಡೆಸಿ 18 ಜಿಲ್ಲೆಗಳಲ್ಲಿ ಬಹಿಷ್ಕಾರ ಸರ್ಕಾರ ಮಧ್ಯೆ ಪ್ರವೇಶಿಸಿ ಸರಿ ಮಾಡದಿದ್ದರೆ, ರಾಜ್ಯದಾದ್ಯಂತ "ಜನ ಜಾಗೃತಿ ಆಂದೋಲನ" ನಡೆಸಿ ಉಗ್ರ ಹೋರಾಟವನ್ನು ಹಮ್ಮಿಕೊಳ್ಳಬೇಕಾಗುತ್ತದೆ. ಜೊತೆಗೆ ಜಿಲ್ಲಾ, ತಾಲೂಕು, ಗ್ರಾಮ ಪಂಚಾಯತಿ, 2028ರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ತಕ್ಕ ಪಾಠ ಕಲಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.ಈ ಸಂದರ್ಭದಲ್ಲಿ: ಬಸವ ಹರಳಯ್ಯ ಮಹಾಸ್ವಾಮಿ ಚಿತ್ರದುರ್ಗ, ಬಸವರಾಜ ಕಲ್ಬುರ್ಗಿ, ಜಿಲ್ಲಾಧ್ಯಕ್ಷರಾದ ಅಶೋಕ ನಂಜಲದಿನ್ನಿ, ಬೈಲಾ ಹೊನ್ನಯ್ಯ, ವಿಶ್ವ ನಾರಾಯಣ ಮೂರ್ತಿ, ಗುರುಮೂರ್ತಿ ಚಿತ್ರದುರ್ಗ, ಡಿಎ□□□ಸ್ ಜಿಲ್ಲಾ ಉಪಾಧ್ಯಕ್ಷ ಶಿವಮೂರ್ತಿ ಎಚ್, ಲಕ್ಷ್ಮಿ ಪತ್ತಾರ್, ಜಯಪ್ರಕಾಶ ಹಿರಿಯೂರು, ಶ್ರೀನಿವಾಸ ಭಂಡಾರಿ ಬಳ್ಳಾರಿ, ಸೇರಿದಂತೆ ದಸಸ ಸಮಿತಿಯ ಅನೇಕ ಸದಸ್ಯರಿದ್ದರು.

ದಲಿತರ ಮೇಲಿನ ದೌರ್ಜನ್ಯ ಖಂಡಿಸಿ ತಿಡಿಗೋಳ ಗ್ರಾಮಕ್ಕೆ ಚಲೋ..! ಮುಖಂಡರ ಬಂಧನ ಬಿಡುಗಡೆ

ನೈಜ್ಯ ದೆಸೆ ನ್ಯೂಸ್



ತಾಲೂಕಿನ ತಿಡಿಗೋಳದಲ್ಲಿ ಜಾತ್ರೆಯ ಸಂದರ್ಭದಲ್ಲಿ ದಲಿತರ ಮೇಲೆ ನಡೆದ ದೌರ್ಜನ್ಯ ಖಂಡಿಸಿ, ನ.8ರಂದು ದಲಿತರ ಹಾಗೂ ಪ್ರಗತಿಪರ ಸಂಘಟನೆಗಳು ಕರೆ ನೀಡಿ, ತಿಡಿಗೋಳ ಚಲೋ ಕಾರ್ಯಕ್ರಮಕ್ಕೆ ತಿಡಿಗೋಳ ಗ್ರಾಮ ಸೇರಿ ಸುತ್ತ 5 ಕಿ.ಮೀ.ವರೆಗೂ ನಿಷೇದಾಜ್ಞೆ ತಾಲೂಕು ಆಡಳಿತ ಜಾರಿ ಮಾಡಿದ ಹಿನ್ನಲೆಯಲ್ಲಿ ನಗರದ ಪಿಡಬ್ಲ್ಯೂಡಿ ಕ್ಯಾಂಪಿನ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆ ಮುಂದೆ ಬೃಹತ್ ಪ್ರತಿಭಟನೆ ನಡೆಸಿದರು.ನಂತರ ತಿಡಿಗೋಳ ಗ್ರಾಮದ ಕಡೆಗೆ ಬೈಕ್ ರ್ಯಾಲಿ ಮುಖಾಂತರ ಮೆರವಣಿಗೆಯಲ್ಲಿ ಸಾವಿರಾರು ಜನರು ಬಪ್ಪೂರು ರಸ್ತೆಯಲ್ಲಿ ಪೋಲಿಸರು ಮುಖಂಡರನ್ನು ತಡೆದರು. ಪ್ರತಿಭಟನಾಕಾರರನ್ನು ವಶಕ್ಕೆ ಪಡೆದು ನಂತರ ಬಿಡುಗಡೆ ಮಾಡಿದರು, ಸುಮಾರು 3 ರಿಂದ 4 ತಾಸ್ ವರೆಗೂ ಪೊಲೀಸರು ಮತ್ತು ಪ್ರತಿಭಟನಾಕಾರರ ನಡುವೆ ಮಾತಿನ ಚಕಮಕಿ ನಡೆಯಿತು.ಇದಕ್ಕೂ ಮುನ್ನ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿ ನಡೆದ ಪ್ರತಿಭಟನಾ ಕಾರ್ಯಕ್ರಮದಲ್ಲಿ ಬಂಡಾಯ ಸಾಹಿತಿ ಹೋರಾಟಗಾರ ಅಲ್ಲಮಪ್ರಭು ಬೆಟ್ಟದೂರು ಹಾಗೂ ರಾಜ್ಯ ದಲಿತ ಮುಖಂಡರಾದ ಎನ್.ಮೂರ್ತಿ, ಮೋಹನರಾಜ, ಜಿಲ್ಲಾ ದಲಿತ ಮುಖಂಡರು ಮಾರೆಪ್ಪ ವಕೀಲರು, ಎಂ.ಆರ್.ಭೇರಿ, ಅಂಬಣ್ಣ ಅರೋಲಿಕರ್, ರವಿಂದ್ರ ಪಟ್ಟಿ, ಸಿಪಿಐಎಮ್ಎಲ್ ಲಿಬರೇಷನ್ ಮುಖಂಡ ಕ್ಲಿಫ್ಟನ್, ಡಿ.ಹೆಚ್.ಪೂಜಾರ್, ನಾಗರಜ ಪೂಜಾರ್, ಶೇಖರಪ್ಪ ದುಮತಿ ವಕೀಲರು ಪ್ರತಿಭಟನಾ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.ನಂತರ ಅಲ್ಲಿಂದ ತಿಡಿಗೋಳ ಗ್ರಾಮದ ಕಡೆಗೆ ಬೈಕ್ ಪ್ರತಿಭಟನಾ ರ್ಯಾಲಿ ನಡೆಯಿತು, ನಗರದ ಪ್ರಮುಖ ರಸ್ತೆಯ ಮೂಲಕ ತಿಡಿಗೋಳ ಕಡೆಗೆ ಪ್ರತಿಭಟನಾ ರ್ಯಾಲಿ ನಡೆಯಿತು. ಮಾರ್ಗ ಮಧ್ಯ ನಗರದ ಬಪ್ಪೂರು ರಸ್ತೆಯಲ್ಲಿ ಪೋಲಿಸರ ಸರ್ಪಗಾವಲು ಇವರನ್ನು ಮುಂದೆ ಹೋಗದಂತೆ ತಡೆಯಿತು. ಸುಮಾರು 3ರಿಂದ 4 ಗಂಟೆಯವರಿಗೆ ಪೊಲೀಸರ ಮತ್ತು ಪ್ರತಿಭಟನಾಕಾರರ ನಡುವೆ ವಾಕ್ಸಮರ ನಡೆಯಿತು. ನಂತರ ಪೊಲೀಸರು ಮುಖಂಡರನ್ನು ಬಂಧಿಸಿ, ಎರಡು ಬಸ್ಸು ಗಳಲ್ಲಿ ತುಂಬಿದರು, ಆದರೂ ಪ್ರತಿಭಟನೆ ನಿಲ್ಲಲಿಲ್ಲ ತಿಡಿಗೋಳ ಕಡೆಗೆ ನಾವು ಹೋಗೆ ಹೋಗುತ್ತೇವೆ ಎಂದು ಘೋಷಣೆ ಕೂಗಿದಾಗ ಬಂಧಿಸಿ ಬಿಡುಗಡೆ ಮಾಡಿದರು.



OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101